ಹಾಸನ

# ಜಿಲ್ಲಾ ರಂಗಮಾಹಿತಿ

ಡಾ. ಚಂದ್ರು ಕಾಳೇನಹಳ್ಳಿ

ಕರ್ನಾಟಕ ನಾಟಕ ಅಕಾಡೆಮಿ

ಜಿಲ್ಲಾ ರಂಗಮಾಹಿತಿ ಮಾಲಿಕೆ

# ಹಾಸನ ಜಿಲ್ಲಾ ರಂಗ ಮಾಹಿತಿ

ಡಾ. ಚಂದ್ರು ಕಾಳೇನಹಳ್ಳಿ

ಕರ್ನಾಟಕ ನಾಟಕ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೦೨

Hasana Jilla Ranga Mahithi :
Hasana District Theater information
in Kannada by Dr. Chandru Kalenahalli
Published by Mr. Siddaraju, Registrar, Karnataka Nataka Academy,
Kannada Bhavana, J.C.Road, Bengaluru- 560002. Phone: 08022237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ

ಮೊದಲ ಮುದ್ರಣ: ೨೦೧೬

ಪ್ರತಿಗಳು : ೧,೦೦೦

ಪುಟಗಳು : viii + ೪೬ = ೫೪

ಬೆಲೆ : ರೂ. ೬೦/

ಪ್ರಕಾಶಕರು
ಸಿದ್ದರಾಜು, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ಪ್ರಿಂಟ್ ಪಾಯಿಂಟ್**
ಬೆಂಗಳೂರು – ೫೬೦ ೦೪೦

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೧೦ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು, ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

**ಎಲ್.ಬಿ.ಶೇಖ (ಮಾಸ್ತರ)**

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ಜಿಲ್ಲಾ ರಂಗಮಾಹಿತಿ ಮುನ್ನೋಟ

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5-6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ, ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೆ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ನಾಟಕಕಾರನ ಕಣ್ಣಿನಿಂದ ಹಾಸನ ಜಿಲ್ಲೆಯ ಮಾಹಿತಿ**

ಜನಪ್ರಿಯ ನಾಟಕಕಾರರು, ಪೌರಾಣಿಕ ನಾಟಕಗಳ ಅಸಂಖ್ಯ ಕಲಾವಿದರು ಜನಿಸಿದ ನಾಡು ಹಾಸನ ಜಿಲ್ಲೆ, ರಂಗಮಂದಿರಗಳ ಕೊರತೆಯನ್ನು ಲೆಕ್ಕಿಸದೆ ನಿರಂತರ ರಂಗ ಚಟುವಟಿಕೆಗಳು ಇಲ್ಲಿ ನಡೆದಿವೆ. ಕರಿಭಂಟನ ಕಾಳಗದಿಂದ ಆರಂಭವಾದ ರಂಗಭೂಮಿ ಅಸ್ಮಿತೆಯ ಹೋರಾಟ ಮುಂದುವರಿದೇ ಇದೆ. ಈ ಜಿಲ್ಲೆಯಲ್ಲಿ ನೀರಿನಲ್ಲಿ ನಾಟಕ ಮಾಡಿದವರಿದ್ದಾರೆ. ಮರದ ಮೇಲೆ ನಾಟಕ ಆಡಿದವರಿದ್ದಾರೆ. ಅಂತೆಯೇ ಲಿಮ್ಕಾ, ಗಿನ್ನಿಸ್ ದಾಖಲೆ ಮಾಡಿದವರಿದ್ದಾರೆ. ವೈವಿಧ್ಯಮಯ ಚಟುವಟಿಕೆಗೆ ಹೆಸರಾದ ರಂಗ ಜಿಲ್ಲೆ ಇದು.

ನಾಟಕಗಳ ರಚನೆಗೆ ಸೀಮಿತವಾಗದೆ, ಅವುಗಳ ಪ್ರಯೋಗಗಳನ್ನು ನಿರಂತರವಾಗಿ ಮಾಡುತ್ತ ಬಂದಿರುವ ರಂಗಕರ್ಮಿ ಚಂದ್ರು ಕಾಳೇನಹಳ್ಳಿ ಕನ್ನಡ ಹವ್ಯಾಸಿ ರಂಗಭೂಮಿಯ ಬಹುಮುಖ್ಯ ನಾಟಕಕಾರರು. ಹಾಸನ ಜಿಲ್ಲೆಯ ರಂಗ ಇತಿಹಾಸವನ್ನು ನಾಟಕಕಾರನ ಕಣ್ಣಿನಿಂದ ನೋಡಲು ಶುರುಮಾಡಿ ನಿಧಾನಕ್ಕೆ ಎಲ್ಲದರತ್ತ ಹೊರಳುತ್ತಾರೆ. ರಂಗಭೂಮಿ ಒಂದು ಮುನ್ನೋಟವನ್ನೂ ನೀಡುತ್ತಾರೆ.

**-ಗುಡಿಹಳ್ಳಿ ನಾಗರಾಜ**

ಪ್ರಕಟಣಾ ಸಮಿತಿ ಸದಸ್ಯರು :

ಕೆ. ಜಗುಚಂದ್ರ

ಉಮೇಶ್ ಸಾಲಿಯಾನ್

ಹಾಲ್ಕುರಿಕೆ ಶಿವಶಂಕರ್

# ಕರ್ನಾಟಕ ನಾಟಕ ಅಕಾಡೆಮಿ

**ಎಲ್.ಬಿ.ಶೇಖ (ಮಾಸ್ತರ)**

ಅಧ್ಯಕ್ಷರು

ಸದಸ್ಯರು

| | |
|---|---|
| ರಾಜಪ್ಪ ಕಿರಗಸೂರು | ಉಮೇಶ ಸಾಲಿಯಾನ್ |
| ಕಲ್ಪನಾ ನಾಗನಾಥ್ | ವಿ.ಎನ್.ಅಕ್ಕಿ |
| ಪಿ.ತಿಪ್ಪೇಸ್ವಾಮಿ | ಬಿ.ಎಂ.ರಾಮಚಂದ್ರ |
| ಎಂ.ಎಸ್.ಗುಣಶೀಲನ್ | ಎನ್.ಕೆ.ರಾಮಕೃಷ್ಣ |
| ಮುದ್ದಣ್ಣ ರಟ್ಟೆಹಳ್ಳಿ | ಎ.ವರಲಕ್ಷ್ಮಿ |
| ಅನ್ನಪೂರ್ಣ ಸಾಗರ | ಎಸ್.ಕೆ.ಕೊನೆಸಾಗರ |
| ಗುಡಿಹಳ್ಳಿ ನಾಗರಾಜ | ಹಾಲ್ಕುರಿಕೆ ಶಿವಶಂಕರ್ |
| ಎಚ್.ಷಡಾಕ್ಷರಪ್ಪ ಹೊಸಮನಿ | ಎಲ್.ಎಚ್.ರಂಗನಾಥಪ್ಪ |
| ಶ್ರೀಪಾದ ಭಟ್ | ಕೆ.ಜಗುಚಂದ್ರ |

**ರಿಜಿಸ್ಟ್ರಾರ್:**

ಸಿದ್ದರಾಜು

ಪ್ರಥಮದರ್ಜೆ ಸಹಾಯಕರು:

ಕೆ.ರೇವಣ್ಣ

**ಕಚೇರಿ ಸಿಬ್ಬಂದಿ :**

ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಲೇಖಕರ ಮಾತು

'ಹಾಸನ ಜಿಲ್ಲೆಯ ರಂಗಮಾಹಿತಿ' ಬಗೆಗೆ ಬರೆದುಕೊಡಲು ಕರ್ನಾಟಕ ನಾಟಕ ಅಕಾಡೆಮಿ ನನ್ನನ್ನು ಕೇಳಿದ್ದರಿಂದ ಈ ಕೈಪಿಡಿಯನ್ನು ರಚಿಸಬೇಕಾಯಿತು. ಈಗಾಗಲೇ ಹಾಸನ ಜಿಲ್ಲೆಯ ರಂಗಮಾಹಿತಿಯನ್ನು ಅಲ್ಲಲ್ಲಿ ಪ್ರಕಟಿಸಿರುವ ಎಲ್ಲ ಮಹನೀಯರ ಲೇಖನಗಳ ಸಹಕಾರವನ್ನು ಪಡೆದುಕೊಂಡಿರುತ್ತೇನೆ. ಇವರೆಲ್ಲರಿಗೂ ನಾನು ಅಭಾರಿಯಾಗಿದ್ದೇನೆ. ಇದಲ್ಲದೆ ನನ್ನ ಜಿಲ್ಲೆಯಾದ್ಯಂತ ಅನೇಕ ಮಿತ್ರರು ಮಾಹಿತಿ ಕಲೆ ಹಾಕುವಲ್ಲಿ ನೆರವಾಗಿದ್ದಾರೆ. ಹಾಸನದಿಂದ ಗೊರೂರ ಅನಂತರಾಜು, ಸಕಲೇಶಪುರದ ರಕ್ಷಿದಿ ಪ್ರಸಾದ್, ಹೊಳೆನರಸೀಪುರದ ಪುಟ್ಟೇಗೌಡ, ಆಲೂರಿನ ಉದಯರವಿ, ಅರಸೀಕೆರೆಯ ಮಮತ ಹಾಗೂ ಮಮತಾರಾಣಿ, ಬೇಲೂರಿನ ಬೇಲೂರು ಕೃಷ್ಣಮೂರ್ತಿ ಅವರು ಹಾಗೂ ಅರಕಲಗೂಡಿನ ಅ.ನ.ಸುಬ್ಬರಾಯರು ನೆರವು ನೀಡಿದ್ದಾರೆ. ಪೌರಾಣಿಕ ರಂಗಭೂಮಿಗೆ ಸಂಬಂಧಿಸಿದಂತೆ ಹೆಚ್.ಎಸ್.ಗೋವಿಂದಗೌಡರು ನನಗೆ ನೆರವು ನೀಡಿದ್ದಾರೆ.

ಇಷ್ಟಾದರೂ ಹಾಸನ ಜಿಲ್ಲೆಯ ಸಂಪೂರ್ಣ ರಂಗಮಾಹಿತಿ ಇದೆಂದು ನನ್ನಗನ್ನಿಸುವುದಿಲ್ಲ. ಇದು ಅಲ್ಪ ಮಾಹಿತಿಯಾಗಿರುತ್ತದೆಯೇ ಹೊರತು ಸಂಪೂರ್ಣ ಮಾಹಿತಿ ಇದಾಗಿರುವುದಿಲ್ಲ. ಈ ನನ್ನ ಕಾಯಕದಲ್ಲಿ ಎಷ್ಟೋ ಗಣ್ಯ ಕಲಾವಿದರ, ನಾಟಕಕಾರರ, ನಟರ ಹೆಸರು ಕೈಬಿಟ್ಟಿರಬಹುದು. ಮುಂದೆ ಯಾರಾದರೂ ಈ ವಿಚಾರವಾಗಿ 'ರಂಗ ಮಾಹಿತಿ ಒದಗಿಸುವವರಿಗೆ ಇದೊಂದು ಪೂರಕ ದಾಖಲೆಯಾಗಿ ಇರಲಿ ಎಂದು ಆಶಿಸುತ್ತೇನೆ.

ಈ ಕೆಲಸಕ್ಕೆ ನನ್ನನ್ನು ಹಚ್ಚಿದ ಅಕಾಡೆಮಿಯ ಅಧ್ಯಕ್ಷರಿಗೂ ರಿಜಿಸ್ಟಾರ್ ಅವರಿಗೂ ಗುಡಿಹಳ್ಳಿ ನಾಗರಾಜ ಅವರಿಗೂ, ಇದಕ್ಕಾಗಿ ನೆರವು ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

**-ಡಾ. ಚಂದ್ರು ಕಾಳೇನಹಳ್ಳಿ**

# ಕರಿಭಂಟನ ಕಾಳಗದಿಂದ ಆರಂಭ. . .

ಹಾಸನ ಜಿಲ್ಲೆ ಭೌಗೋಳಿಕವಾಗಿ ಮೂರು ಭಿನ್ನ ವಾತಾವರಣದ ಜಿಲ್ಲೆ. ಪಶ್ಚಿಮಕ್ಕೆ ಘಟ್ಟಗಳಿಗೆ ಆತುಕೊಂಡಂತಿರುವ ಮಲೆನಾಡು ಪೂರ್ವಕ್ಕೆ ವ್ಯಾಪಿಸಿರುವ ಅರೆಮಲೆನಾಡು ಮತ್ತು ಬಯಲುನಾಡು. ಅತ್ತ ಮಲೆನಾಡಿಗೆ ಧಾರಾಕಾರವಾಗಿ ಬೀಳುವ ಮಳೆ. ಬಯಲು ನಾಡಲ್ಲಿ ಬೆಳೆ ಇಲ್ಲದೆ ಹಪಹಪಿಸುವ ಬಯಲು ಸೀಮೆಯ ಜನ, ಜಿಲ್ಲೆಯ ವಿಶಿಷ್ಟ ಮಣ್ಣಿನ ರಚನೆಯಿಂದಾಗಿ ಆಹಾರ ಬೆಳೆಗಳ, ವಾಣಿಜ್ಯ ಬೆಳೆಗಳ ತವರು. ಇಲ್ಲಿನ ವೈವಿಧ್ಯ ಬೆಳೆಗಳೆಂದರೆ ಕಾಫಿ, ಏಲಕ್ಕಿ, ತೆಂಗು, ಕಬ್ಬು, ಆಲೂಗಡ್ಡೆ, ತಂಬಾಕು, ಭತ್ತ, ರಾಗಿ, ಅವರೆ, ಹುರುಳಿ, ಸೂರ್ಯಕಾಂತಿ, ಇತ್ಯಾದಿ ಬೆಳೆಗಳಲ್ಲದೆ ಹೈನುಗಾರಿಕೆಗೂ ಪ್ರಸಿದ್ಧಿ. ಈ ಜಿಲ್ಲೆಯನ್ನು ಕಲ್ಪತರು ನಾಡು, ಸಕ್ಕರೆಯಸೀಮೆ, ಭತ್ತದ ಕಣಜ, ಕಾಫಿ, ಏಲಕ್ಕಿ, ಮೆಣಸು ಬೆಳೆಯ ತವರು ಎಂದೆಲ್ಲಾ ಕರೆಯಬಹುದು.

ಐತಿಹಾಸಿಕವಾಗಿ ಗಂಗರು, ಹೊಯ್ಸಳರು ಆಳಿದ ನಾಡು ಭಾರತದಲ್ಲಿ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಪ್ರಸಿದ್ಧಿ ಪಡೆದ ಚಾರಿತ್ರಿಕ ನೆಲೆಗಳಾದ ಬೇಲೂರು, ಹಳೇಬೀಡು, ಶ್ರವಣಬೆಳ್ಗೊಳ ಈ ಜಿಲ್ಲೆಗೆ ಕಿರೀಟಪ್ರಾಯವಾದ ಪ್ರೇಕ್ಷಣೀಯ ಸ್ಥಳಗಳು, ಚಕ್ರವರ್ತಿ ಚಂದ್ರಗುಪ್ತನು ದ್ವಾದಶವರ್ಷ ಕ್ಷಾಮಪ್ರಸಂಗ ಕಾಲದಲ್ಲಿ ಭದ್ರಬಾಹ ಮುನಿಗಳೊಡಗೂಡಿ ಉತ್ತರದಿಂದ ದಕ್ಷಿಣಕ್ಕೆ ಬಂದು ನೆಲೆನಿಂತ ಸ್ಥಳಗಳು ಶ್ರವಣಬೆಳೊಳದಲ್ಲಿ ಚಂದ್ರಗಿರಿ ಬೆಟ್ಟದಲ್ಲಿದೆ. ಕ್ರಿ.ಪೂ. ೩ನೇ ಶತಮಾನಕ್ಕೆ ಸೇರಿದ್ದೆಂದು ಹೇಳುವ ಶಾಸನದಲ್ಲಿ ಈ ವಿಷಯದ ಪ್ರಸ್ತಾಪವಿದೆ. ಗಂಗದೊರೆ ರಾಚಮಲ್ಲನ ಮಂತ್ರಿ ಚಾವುಂಡರಾಯ ಕೆತ್ತಿಸಿದ ಬಾಹುಬಲಿಯ ಏಕಶಿಲಾಮೂರ್ತಿ ಇಂದ್ರಗಿರಿ ಬೆಟ್ಟದಲ್ಲಿ ಇಡೀ ಜಗತ್ತಿಗೆ ಶಾಂತಿ ಸಂದೇಶ ಸಾರುತ್ತಿದೆ. ಕದಂಬರ ಅರಸ ಕಾಕುಸ್ಥವರ್ಮನ ಕಾಲಕ್ಕೆ ಸೇರಿದ ಕ್ರಿ.ಶ. ೪೫೦ ರ ಕನ್ನಡದ ಮೊದಲ ಶಾಸನ ಬೇಲೂರು ತಾಲೂಕಿನ ಹಲ್ಮಿಡಿಯಲ್ಲಿದೆ.

“ಸಳ'ನಿಂದ ಸ್ಥಾಪಿತಗೊಂಡು ಹೊಯ್ಸಳ ಸಾಮ್ರಾಜ್ಯದ ರಾಜಧಾನಿ ದ್ವಾರಸಮುದ್ರವು ಇಂದಿನ ಹಳೇಬೀಡು ಎಂಬ ಹೆಸರಿನಲ್ಲಿದೆ. ಸಳನ ಮಗ ವಿಜಯಾದಿತ್ಯ, ನೃಪಕಾಮ, ಇಮ್ಮಡಿ ವಿನಯಾದಿತ್ಯ, ಎರೆಯಂಗ, ವಿಷ್ಣುವರ್ಧನ, ನರಸಿಂಹ ವೀರಬಲ್ಲಾಳ ಮುಂತಾದ ದೊರೆಗಳು ಈ ನಾಡನ್ನು ಬಹಳ ಕಾಲ ಆಳಿ ಶ್ರೀಮಂತಗೊಳಿಸಿದ್ದಾರೆ.

ಅನೇಕ ಕವಿಗಳಿಗೆ ಶಿಲ್ಪಿಗಳಿಗೆ ಆಶ್ರಯಧಾತರಾಗಿ ಬೇಲೂರು, ಹಳೇಬೀಡು ಮುಂತಾದ ಕಡೆ ತಮ್ಮ ಕಾಲದ ಶಿಲ್ಪವೈಭವ ಮೆರೆದಿದ್ದಾರೆ.

ಶ್ರೀರಾಮಾನುಜಾಚಾರ್ಯರು ವಿಷ್ಣುವರ್ಧನನ ರಾಜ್ಯದಲ್ಲಿ ನೆಲೆನಿಂತು ವೈಷ್ಣವಧರ್ಮ ಪ್ರಚಾರ ನಡೆಸಿದ ಕ್ಷೇತ್ರ ಇದು. ವಿಷ್ಣವರ್ಧನ ಶಾಂತಲೆಯರು ಜೈನಧರ್ಮ ಅವಲಂಬಿಗಳು. ನಂತರದಲ್ಲಿ ವಿಷ್ಣುವರ್ಧನ ವೈಷ್ಣವ ಧರ್ಮಿಯನಾದ. ಆದರೂ ಇವನ ರಾಜ್ಯ ಸತ್ವಧರ್ಮಗಳ ಸಮನ್ವಯದ ನಾಡಾಗಿತ್ತು.

ಹಾಸನ ಜಿಲ್ಲೆಯ ರಂಗಭೂಮಿ ಚರಿತ್ರೆ ಆರಂಭವಾಗುವುದು ಹಾಸನ ಜಿಲ್ಲೆಯಲ್ಲಿ ಒಂದು ಕಾಲಕ್ಕೆ ಪ್ರಸಿದ್ದಿ ಹೊಂದಿದ್ದ, ಯಕ್ಷಗಾನ ಬಯಲಾಟದ ಮೂಲಕ ಪ್ರದರ್ಶಿತವಾಗುತ್ತಿದ್ದ 'ಕರಿಭಂಟನ ಕಾಳಗ'ದಿಂದ. ಸಂಕ್ಷಿಪ್ತವಾಗಿ ಕಥೆಯ ಘಟನಾವಳಿ ಹೀಗಿದೆ. ಹಳೇಬೀಡು ಪಟ್ಟಣದ ಬನವಂತಾದೇವಿಯ ಮಗ 'ಕರಿಭಂಟ'ನು ತನಗೆ ಅನುರೂಪಳಾದ ಹೆಣ್ಣೊಬ್ಬಳನ್ನು ಹುಡುಕುತ್ತಾ ಮಂಡ್ಯ ಜಿಲ್ಲೆಯ ತೊಣ್ಣನೂರಿಗೆ ಬಂದು ಅಲ್ಲಿ ಉದ್ದಂಡಿ ರಾಕ್ಷಸಿಯ ಮಗಳಾದ ಪುಂಡರೀಕಾಕ್ಷಿಯ ಪ್ರೇಮದಲ್ಲಿ ಸಿಲುಕಿ ತನ್ನ ಪ್ರೇಯಸಿಯೊಡನೆ ರಾಕ್ಷಸಿಯ ಹಿಡಿತಕ್ಕೆ ಸಿಕ್ಕುತ್ತಾನೆ. ಆನಂತರ ಪ್ರೇಯಸಿ ಅವನನ್ನು ಅಲ್ಲಿಂದ ಪಾರುಮಾಡಿದರೂ ಉದ್ದಂಡಿರಕ್ಕಸಿ ಅವನನ್ನು ಕೊಲ್ಲುತ್ತಾಳೆ. ಆನಂತರ ಪವಾಡ ಸದೃಶವಾಗಿ ಪಾರಾಗಿ ಪುಂಡರೀಕಾಕ್ಷಿಯನ್ನು ಧರಣಿ ಮೋಹಿನಿಯರಿಬ್ಬರನ್ನು ವಿವಾಹವಾಗುವುದರ ಮೂಲಕ ಸುಖಾಂತವಾಗುತ್ತದೆ. ಈ ಕರಿಭಂಟನ ಕತೆಯು ಒಂದು ಜನಪದ ಕಥೆಯ ಮಾದರಿಯಲ್ಲಿ ರಚಿತವಾಗಿದ್ದರೂ ಎಲ್ಲಿಯೋ ಹೊಯ್ಸಳ ಅರಸರ ಜೊತೆಗೆ ಥಳುಕು ಹಾಕಿಕೊಳ್ಳುತ್ತದೆ. ಈ ಪ್ರಸಂಗವು ಹಿಂದೆ ಮೂಡಲಪಾಯ ಯಕ್ಷಗಾನ ರೂಪದಲ್ಲಿ ಪ್ರಯೋಗದಲ್ಲಿದ್ದು ಇಂದು ಅಳಿವಿನ ಅಂಚಿನಲ್ಲಿದೆ. ಇದರ ಬಗೆಗೆ ಹೆಚ್ಚಿನ ಸಂಶೋಧನೆ ನಡೆಯಬೇಕಿದೆ. ಇದು ಒಂದು ಜನಪದ ಕತೆಯ ಮಾದರಿಯಲ್ಲಿದ್ದರೂ ಇತಿಹಾಸದ ಎಳೆಗಳು ಇದರಲ್ಲಿರುವುದರಿಂದ ಇದನ್ನೊಂದು ಐತಿಹಾಸಿಕ ನಾಟಕ ಎಂದೂ ಗುರುತಿಸಬಹುದು.

ಕ್ರಿ.ಶ. ೧೧೮೨ ರ ಹೊಯ್ಸಳರ ಒಂದು ಶಾಸನದಲ್ಲಿ ವೇಲಾಪುರಿ, ದ್ವಾರಸಮುದ್ರಗಳನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಿದ ಹೊಯ್ಸಳರು ರಂಗಭೂಮಿ, ನಾಟ್ಯಶಾಸ್ತ್ರಕ್ಕೆ ಮಾನ್ಯತೆ ನೀಡಿದ್ದರು. ಅದನ್ನು ಒಂದು 'ರಾಜಕಲೆ'ಯಾಗಿ ಪರಿಗಣಿಸಿದ್ದರು. ವೀರಬಲ್ಲಾಳನ ಮಂತ್ರಿ ಚಂದ್ರಮೌಳಿಯು ಆಗಮ, ತರ್ಕ, ವ್ಯಾಕರಣ ಶಾಸ್ತ್ರಗಳಲ್ಲದೆ ನಾಟ್ಯಕಲೆಯಲ್ಲೂ ಪ್ರವೀಣನಾಗಿದ್ದನು. ರಂಗಭೂಮಿಯ ಅವಿಭಾಜ್ಯ ಅಂಗವೇ ಆಗಿದ್ದ ಭರತ ನಾಟ್ಯಶಾಸ್ತ್ರದಲ್ಲಿ ಅಂದಿಗೆ ಪ್ರವೀಣೆಯಾಗಿದ್ದ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ನೃತ್ಯ ಪ್ರದರ್ಶನಕ್ಕಾಗಿ ದೇವಾಲಯದೊಳಗೆ ರಂಗವೇದಿಕೆ

ನಿರ್ಮಿಸಿರುವುದನ್ನು ಇಂದಿಗೂ ಕಾಣಬಹುದಾಗಿದೆ.

ಒಂದನೇ ನರಸಿಂಹನ ಕಾಲದಲ್ಲಿದ್ದ ಯತಿಪತಿಸಿದ್ದಾಂತ ಚಕ್ರೇಶ್ವರನು ವ್ಯಾಕರಣ, ಕಾವ್ಯಗಳೊಂದಿಗೆ ನಾಟಕವನ್ನೂ ರಚಿಸುವುದರಲ್ಲಿ ಪರಿಣತನಾಗಿದ್ದನು. ಹೊಯ್ಸಳರ ಕಾಲದ ಕವಿ ಜನ್ನನ ಯಶೋಧರ ಚರಿತೆಯಲ್ಲಾಗಲೀ ಹೊಯ್ಸಳ ಅರಸರಲ್ಲಿ ಕರಣಿಕನಾಗಿದ್ದ ಹರಿಹರ ಹಾಗೂ ಅವನ ಸೋದರಳಿಯ ರಾಘವಾಂಕರ ಕಾವ್ಯಗಳಲ್ಲಿ ನಾಟಕೀಯ ಅಂಶಗಳನ್ನು ಮರೆಯುವಂತಿಲ್ಲ. ಅಲ್ಲಲ್ಲಿ ಗೊಂಬೆಯಾಟಗಳು, ಯಕ್ಷಗಾನ ಬಯಲಾಟಗಳು ನಡೆಯುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ೧೧ನೇ ಶತಮಾನದಿಂದಲೂ ರಾಜರನ್ನು, ರಾಜಪರಿವಾರವನ್ನು ಸಂತುಷ್ಟಗೊಳಿಸುವ ಸಲುವಾಗಿ ಊರ ಮುಂದೆ ಎತ್ತರವಾದ ಪ್ರದೇಶಗಳಲ್ಲಿ ರಂಗಪ್ರಯೋಗ ನಡೆಯುತ್ತಿದ್ದವು.

ಆಯಾ ಗ್ರಾಮದ ಕಲಾವಿದರ ಇಚ್ಛೆಗನುಸಾರವಾಗಿ ಪ್ರಸಂಗಗಳನ್ನು ಕಲಿಸಲಾರಂಭಿಸಿದರು. ಈ ಪರಂಪರೆ ಇಂದಿಗೂ ಹಾಸನ ಜಿಲ್ಲೆಯ ನಗರ ಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಇಂದಿಗೂ ಚಾಲ್ತಿಯಲ್ಲಿದೆ.

ಪೌರಾಣಿಕ ನಾಟಕಗಳಿಗೆ ಒಂದು ಕಾಲಕ್ಕೆ ಪುರುಷರೇ ಸ್ತ್ರೀಪಾತ್ರ ವಹಿಸುತ್ತಿದ್ದರು. ಕಾಲ ಬದಲಾದಂತೆ ಸ್ತ್ರೀಪಾತ್ರಕ್ಕೆ ರಂಗಕಲಾವಿದೆಯರನ್ನು ಹಣ ಕೊಟ್ಟು ಕರೆಸಿ ನಾಟಕ ಅಭಿನಯಿಸುವ ಪದ್ಧತಿ ಇಲ್ಲಿ ಸರ್ವೇಸಾಮಾನ್ಯವಾಗಿದೆ. ಇದರಿಂದಾಗಿ ರಂಗಕಲಾವಿದೆಯರಿಗೂ ಆರ್ಥಿಕವಾಗಿ ಸಹಕಾರಿಯಾಯಿತು.

ಹಾಸನ ಜಿಲ್ಲೆಯಲ್ಲಿ ಪೌರಾಣಿಕ ರಂಗಭೂಮಿ ಪ್ರಚಲಿತಗೊಂಡ ಸಂದರ್ಭದಲ್ಲಿ ಮಂಡ್ಯದಿಂದ ಸ್ಪ್ರಿಂಗ್ ಚಪ್ಪರದ ಸೀನರಿ, ಡ್ರೆಸ್ ತರಿಸಿ ನಾಟಕ ಆಡುವ ಪದ್ಧತಿ ರೂಢಿಯಲ್ಲಿದ್ದಿತು. ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲದ ಸಂದರ್ಭದಲ್ಲಿ ಡೈನಮೊದಿಂದ ಬೆಳಕಿನ ಸಂಯೋಜನೆ ಮಾಡಿಕೊಳ್ಳುತ್ತಿದ್ದರು. ಆದರೆ ಇಂದು ಹಾಸನದಲ್ಲಿಯೇ ಪೌರಾಣಿಕ ನಾಟಕಕ್ಕೆ ಬೇಕಾದ ಸೀನರಿ, ಡ್ರೆಸ್ ದೊರಕುತ್ತಿವೆ.

# ಹಾಸನ ಜಿಲ್ಲೆಯ ನಾಟಕಗಳ ಸಂಕ್ಷಿಪ್ತ ಇತಿಹಾಸ

ಶ್ರವಣಬೆಳೊಳದೊಡನೆ ಸಂಪರ್ಕಹೊಂದಿದ್ದ ಮಹಾಕವಿ ರನ್ನನ (ಇವನು ಸ್ವತಃ ತನ್ನ ಹಸ್ತದಿಂದ ಸಹಿಮಾಡಿರುವ "ಶ್ರೀಕವಿರತ್ನ" ಎಂಬ ಲಿಪಿ ಈಗಲೂ ಚಿಕ್ಕಬೆಟ್ಟದಲ್ಲಿದೆ) 'ಗದಾಯುದ್ಧ'ದಲ್ಲಿ ನಾಟಕೀಯ ಗುಣಗಳಿವೆ. ಹಾಗೆಯೇ ಬೇಲೂರಿನೊಡನೆ ಸಂಪರ್ಕ ಹೊಂದಿದ್ದ ರಾಘವಾಂಕನ ಹರಿಶ್ಚಂದ್ರಕಾವ್ಯ'ದಲ್ಲಿ ನಾಟಕೀಯ ಗುಣವಿದೆ.

ಹಾಸನ ಜಿಲ್ಲೆಯ ರಂಗಭೂಮಿ ಇತಿಹಾಸ ಆರಂಭವಾಗುವುದು ಕೇರಳಾಪುರದ ಬಸಪ್ಪಶಾಸ್ತ್ರಿಗಳ ಅನುವಾದಿತ ನಾಟಕ "ಶಾಕುಂತಲ" (ಕಾಲ ೧೮೮೨) ದಿಂದ. ಅಲ್ಲದೆ ಅವರು ಚಾಮರಾಜ ಒಡೆಯರ ಪ್ರೋತ್ಸಾಹದ ಮೇರೆಗೆ ಶೇಕ್ಸಪಿಯರ್‌ನ "ಒಥೆಲೊ' ನಾಟಕವನ್ನು 'ಶೂರಸೇನ ಚರಿತ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದರು. ೧೯ನೇ ಶತಮಾನದಲ್ಲಿ ಬೇಲೂರಿನ ಯಜಮಾನ್ ಸಿದ್ದಲಿಂಗಪ್ಪನವರು ಆ ಕಾಲಕ್ಕೆ ಪ್ರಚಲಿತವಿದ್ದ 'ಕರಿಭಂಟನ ಕಾಳಗ' ಎಂಬ ಯಕ್ಷಗಾನದ ಪ್ರಸಂಗ ಸಾಹಿತ್ಯ ರಚಿಸಿದ್ದಾರೆ.

ಹಾಸನ ಜಿಲ್ಲೆಯಲ್ಲಿ ವೃತ್ತಿ, ಹವ್ಯಾಸಿ ರಂಗಭೂಮಿಗಳು ಹುಟ್ಟುವ ಮೊದಲು ಜನಪದ ರಂಗಭೂಮಿ ಪ್ರಚಲಿತವಿದ್ದಂತೆ ಕಾಣುತ್ತದೆ. ಪೌರಾಣಿಕ ವಸ್ತುಗಳಾದ ಐರಾವತ, ತ್ರಿಪುರ ಸಂಹಾರ, ಕರಿಭಂಟ, ಲವ-ಕುಶ, ಗಯಚರಿತ್ರೆ ಮುಂತಾದವು ಹೆಚ್ಚು ಪ್ರಚಲಿತ ಇದ್ದಂತೆ ಕಾಣುತ್ತವೆ. ಆದರೆ ಇವೆಲ್ಲ ಈಗ ಇಲ್ಲಿ ಅಳಿದುಹೋಗಿವೆ ಎಂಬುದು ವಿಷಾದದ ಸಂಗತಿ.

ಆನಂತರದಲ್ಲಿ ಹಾಸನ ಜಿಲ್ಲೆಯಲ್ಲಿ ಕಂಪನಿ ನಾಟಕಗಳಿಂದ ಪ್ರೇರಣೆ ಹೊಂದಿದ ಪೌರಾಣಿಕ ರಂಗಭೂಮಿ ಪ್ರವರ್ಧಮಾನಕ್ಕೆ ಬಂದಿತು. ಇದು ಎಷ್ಟೊಂದು ಜನಪ್ರಿಯ ರಂಗಭೂಮಿಯಾಗಿ ಪ್ರಸಿದ್ಧ ಹೊಂದಿತೆಂದರೆ ಅನೇಕ ಸ್ಥಳೀಯ ಕಲಾವಿದರು ಪೌರಾಣಿಕ ನಾಟಕಗಳ ಭಾಗವತರಾಗಿ ತಯಾರಾಗಿ ಪ್ರತಿ ಹಳ್ಳಿಗೆ ಹೋಗಿ ಇಂತಿಷ್ಟು ಹಣ, ಇಂತಿಷ್ಟು ರಾಗಿ, ಭತ್ತ ಎಂದು ಒಪ್ಪಂದ ಮಾಡಿಕೊಂಡು ಹಳ್ಳಿಯ ರಂಗಾಸಕ್ತರನ್ನು

ಸೇರಿಸಿ ಪೌರಾಣಿಕ ನಾಟಕಗಳನ್ನು ಕಲಿಸಿ ಪ್ರದರ್ಶಿಸಿದರು. ಇಂತಹ ಭಾಗವತರು ಕಲಾವಿದರೂ ಪ್ರತೀ ಹಳ್ಳಿಯಲ್ಲೂ ನಮಗೆ ಕಾಣ ಸಿಗುತ್ತಾರೆ. ಇವರಿಗೆ ನಾಟಕದ ಗೆಜ್ಜೆಪೂಜೆ ಹಾಗೂ ಪ್ರದರ್ಶನದ ದಿನ ಬೇಕಾಗಿದ್ದ ತಬಲ, ಕ್ಲಾರಿಯೊನೆಟ್ ವೃತ್ತಿಕಲಾವಿದರು ಹುಟ್ಟಿಕೊಂಡರು.

ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಖ್ಯಾತರಾದ ಅನಕೃ ಅನೇಕ ನಾಟಕಗಳನ್ನು ಬರೆದಿದ್ದಾರೆ. ಪ್ರಕಟಗೊಂಡಿರುವ ಅವರ ಒಟ್ಟು ನಾಟಕಗಳು ೨೩. ಸಂಖ್ಯಾದೃಷ್ಟಿಯಿಂದ ನಾಟಕ ಬರೆದವರಲ್ಲಿ ಜಿಲ್ಲೆಯಲ್ಲಿ ಅನಕೃ ಎರಡನೆಯವರು. ಅವರು ಹತ್ತಕ್ಕೂ ಹೆಚ್ಚು ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. 'ಮದುವೆಯೊ ಮನೆಹಾಳೊ', 'ಆದದ್ದೇನು', ಆಹುತಿ', 'ಗುಬ್ಬಚ್ಚಿಗೂಡು', 'ಧರ್ಮಸಂಕಟ', 'ವಿಶ್ವಧರ್ಮ', 'ಜ್ವಾಲಾಮುಖಿ', 'ಪಾಲು' ಇತ್ಯಾದಿ. ಅವರು ಬರೆದ ಪ್ರಮುಖ ಪೌರಾಣಿಕ ನಾಟಕಗಳೆಂದರೆ 'ಸ್ವರ್ಣಮೂರ್ತಿ', 'ಹಿರಣ್ಯಕಶಿಪು', 'ಸೂತಪುತ್ರ ಕರ್ಣ', 'ಶ್ರೀರಾಮ ಪಾದುಕಾ ಪಟ್ಟಾಭಿಷೇಕ' ಇತ್ಯಾದಿ. ಅವರು ಬರೆದ ಪ್ರಮುಖ ಐತಿಹಾಸಿಕ ನಾಟಕಗಳೆಂದರೆ ಜಗಜ್ಯೋತಿ ಬಸವೇಶ್ವರ, ನಾಡಶಿಲ್ಪಿ ಕೆಂಪೇಗೌಡ, ರಜಪೂತಲಕ್ಷ್ಮಿ, ರಾಜನರ್ತಕಿ, ಅನುಗ್ರಹ ಇತ್ಯಾದಿ. ಇದಲ್ಲದೆ “ನಾಟಕಕಲೆ' ಎಂಬ ಶಾಸ್ತ್ರಗ್ರಂಥವನ್ನೂ ಬರೆದಿದ್ದಾರೆ. ಈ ಕೃತಿಯಲ್ಲಿ ಅವರು ಕನ್ನಡ ರಂಗಭೂಮಿಯನ್ನು ಸಮಗ್ರವಾಗಿ ಅವಲೋಕಿಸಿದ್ದಾರೆ.

ಅರಕಲಗೂಡಿನಲ್ಲಿ ೧೯೦೮ರಲ್ಲಿ ಜನ್ಮ ತಾಳಿದ ಅನಕೃ ಕನ್ನಡ ಕಾದಂಬರಿ, ರಂಗಭೂಮಿಗೆ ತಮ್ಮದೇ ಅನನ್ಯ ಕೊಡುಗೆ ನೀಡಿದ್ದಾರೆ. ಅನಕೃ ತಂದೆ ನರಸಿಂಹರಾಯರಿಗೂ ನಾಟಕ ಶಿರೋಮಣಿ ಎ.ವಿ.ವರದಾಚಾರ್ಯರಿಗೂ ಇದ್ದ ಕಾಲೇಜು ಗೆಳೆತನವೇ ಅನಕೃ ನಾಟಕ ಕ್ಷೇತ್ರಕ್ಕೆ ರಂಗಪ್ರವೇಶ ಮಾಡಲು ಸಹಕಾರಿಯಾಯಿತು. ವರದಾಚಾರ್ಯರು ಸಾಮಾಜಿಕ ನಾಟಕಗಳ ಕೊರತೆ ಇದೆ ಎಂದು ಅನಕೃ ಅವರಿಗೆ ಹೇಳಿದ್ದರಿಂದಲೇ ಇವರು 'ಮದುವೆಯೋ ಮನೆಹಾಳೋ' ಎಂಬ ಕೃತಿಯನ್ನು ಬರೆಯಲು ಸಾಧ್ಯವಾಯಿತು.

ಹಾಸನ ಜಿಲ್ಲೆಯ ರಂಗಭೂಮಿಗೆ ಹೆಸರಿಸಬೇಕಾದ ಇನ್ನೊಂದು ಹೆಸರು ಡಿ.ಹೆಚ್.ಜ್ವಾಲನಯ್ಯ ಅವರು. ಒಟ್ಟು ಹದಿನಾರು ನಾಟಕಗಳನ್ನು ಬರೆದಿದ್ದಾರೆ. ಅವರ ಪ್ರಮುಖ ನಾಟಕಗಳೆಂದರೆ ರಾಜಲಾ, ಮಹಾಶಿಲ್ಪಿ, ಚಾಣಕ್ಯ, ಮಹಾಪರಿವರ್ತನ, ನಯನ ಬಂಧನ ಮುಖ್ಯವಾದವು. ಇವರ ನಾಟಕಗಳ ವಸ್ತು ಐತಿಹಾಸಿಕವಾಗಿರುವುದು ಗಮನಾರ್ಹ.

ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ಹೆಚ್ಚಾಗಿ ಗುರುತಿಸಿಕೊಂಡಿದ್ದ ಎಸ್.ಕೆ.ಕರೀಂಖಾನರು ನಿರ್ದೋಷಿ, ಟಿಪ್ಪುಸುಲ್ತಾನ್, ಬೆಂಗಳೂರು ಸಂಸ್ಥಾಪಕ ಕೆಂಪೇಗೌಡ ಎಂಬ ನಾಟಕಗಳನ್ನು ಬರೆದಿದ್ದಾರೆ.

ಮತಿಘಟ್ಟ ಕೃಷ್ಣಮೂರ್ತಿಯವರು ರೇಡಿಯೋ ನಾಟಕಗಳಾದ ಕಲ್ಯಾಣಿ, ಜೇನುಗೂಡು, ಹೊಸಹಳ್ಳ ಈ ನಿಟ್ಟಿನಲ್ಲಿ ಮುಖ್ಯವಾದವು. ಜನಪದ ಕತೆಯ ಎಳೆಯೊಂದನ್ನು ಆಧರಿಸಿ "ಭರತನ ಸೊಂಟಕ್ಕೆ ಘಂಟೆ" ಎಂಬ ರಾಜಕೀಯ ವಿಡಂಬನ ನಾಟಕ ಬರೆದಿದ್ದಾರೆ.

ಹಾಸನ ಜಿಲ್ಲೆಯ ಪತ್ರಿಕೋದ್ಯಮದಲ್ಲಿ ಗುರುತಿಸಿಕೊಂಡಿದ್ದ ದಿ.ಕೃ.ನ.ಮೂರ್ತಿ ಅವರು ಸುಮಾರು ಹತ್ತಕ್ಕೂ ಹೆಚ್ಚು ಪ್ರಹಸನಗಳನ್ನು ಬರೆದಿದ್ದಾರೆ. ಶ್ರೀಯುತರು ಅಂದಿನ ಕಾಲಕ್ಕೆ ಎರಡು ಬೀದಿನಾಟಕಗಳನ್ನೂ ಬರೆದಿರುವುದು ಅಚ್ಚರಿಯ ಸಂಗತಿ.

ಹಾಸನ ಜಿಲ್ಲೆಯಲ್ಲಿ ಸಂಖ್ಯಾದೃಷ್ಟಿಯಿಂದ ಹೆಚ್ಚು ನಾಟಕಗಳನ್ನು ಬರೆದವರು ಬೇಲೂರು ಕೃಷ್ಣಮೂರ್ತಿ ಅವರು. ವೃತ್ತಿಯಲ್ಲಿ ವ್ಯಾಯಾಮ ಶಿಕ್ಷಕರಾಗಿದ್ದ ಇವರು ನಾಟಕ ರಚನೆಯನ್ನೇ ಒಂದು ಪ್ರವೃತ್ತಿಯಾಗಿ ಮಾಡಿಕೊಂಡು ನಿರಂತರವಾಗಿ ರಂಗಭೂಮಿಯ ಕೆಲಸಮಾಡುತ್ತ ಬರುತ್ತಿದ್ದಾರೆ. ಜನಪ್ರಿಯ ನಾಟಕಗಳನ್ನು ಬರೆದ ಕೀರ್ತಿ ಇವರದು. ಇವರು ಬರೆದ 'ತ್ಯಾಗಿ' ಒಂದು ಗಂಭೀರ ನಾಟಕ, 'ವಿಷ್ಣುವರ್ಧನ' ಒಂದು ಐತಿಹಾಸಿಕ ನಾಟಕ, ಉಳಿದ ಬಹುಪಾಲು ನಗೆನಾಟಕಗಳು, ಗಂಡಿಗಾಗಿ ಗುದ್ದಾಟ, ನರಕದಲ್ಲೊಂದ್ಮಾಟ, ಬೇಸ್ತುಬಿದ್ದ ಭಾವ..... ಹೀಗೆ ಇವರ ನಾಟಕಗಳ ಪಟ್ಟಿ ಉದ್ದುದ್ದ ಬೆಳೆಯುತ್ತದೆ. ಇವರು ಬರೆದ ನಾಟಕಗಳು ಶತಕವನ್ನು ದಾಟುತ್ತವೆ. ಕರ್ನಾಟಕದ ಹೊರಗೂ, ಒಳಗೂ ಪ್ರದರ್ಶನಗೊಂಡಿರುವುದು ಇವರ ನಾಟಕಗಳ ಒಂದು ಹೆಗ್ಗಳಿಕೆ.

ಯೋಗಾಸನ ಪರಿಣತ, ವ್ಯಾಯಾಮ ಶಿಕ್ಷಕರಾಗಿದ್ದ **ಹೆಚ್.ಬಿ.ರಮೇಶ್** ಅವರು ಬಾಡ್ಡೆಮನೆ, ಚೆರೋಟಿದೆವ್ವ ಎಂಬ ಎರಡು ನಗೆ ನಾಟಕಗಳನ್ನು ಕಲಾತಪಸ್ವಿ, ಪರಿವರ್ತನೆ ಎಂಬ ಎರಡು ಗಂಭೀರ ನಾಟಕಗಳನ್ನು ಬರೆದಿದ್ದಾರೆ.

ಹಂಪಿ ವಿ.ವಿ.ಯ ಕುಲಪತಿಗಳಾಗಿದ್ದ ಶ್ರೀ ಹೆಚ್.ಜೆ.ಲಕ್ಕಪ್ಪಗೌಡರು ಸಿದ್ದರಾಮ ಎಂಬ ಸರಳ ರಗಳೆಯ ನಾಟಕವನ್ನು ರಚಿಸಿದ್ದಾರೆ. ದಿ. ಡಿ.ಸಿ. ಅನಂತಸ್ವಾಮಿ ಅವರು ಯಶೋಧರ ವಿಜಯ, ಜೀವನ ಶಿಲ್ಪಿ ಎಂಬ ಎರಡು ನಾಟಕಗಳನ್ನು ಬರೆದಿದ್ದಾರೆ.

ದಮ್ಮನಿಂಗಲದ ದಿ.ಗೋವಿಂದದಾಸ್ ಅವರು ವಿಕ್ರಮ ವಿಜಯ ಹಾಗೂ ಮರಳು ಮದುವೆ ಎಂಬ ನಾಟಕಗಳನ್ನು ಬರೆದಿದ್ದಾರೆ.

ಸಕಲೇಶಪುರದ ಸಾರಂಗ (ರಂಗೇಗೌಡ) ಗೆಳೆಯರೊಡಗೂಡಿ ವಿಶ್ವಕಲಾನಿಕೇತನ ಎಂಬ ರಂಗತಂಡ ಆರಂಭಿಸಿ ಅನೇಕ ನಾಟಕಗಳನ್ನು ರಂಗದ ಮೇಲೆ ತಂದರು.

ಇವರೇ ರಚಿಸಿದ ಕೌರವೇಶ್ವರ, ಕರ್ಣ, ಶ್ರೀಕೃಷ್ಣದೇವರಾಯ ಮುಂತಾದ ನಾಟಕಗಳನ್ನು ಹಲವು ಸ್ಪರ್ಧೆಗಳಲ್ಲಿ ಪ್ರದರ್ಶಿಸಿ ಪಾರಿತೋಷಕಗಳನ್ನು ಗಳಿಸಿದ್ದರು.

ಹಾಸನ ಜಿಲ್ಲೆಯಿಂದ ಹೆಸರಿಸಬಹುದಾದ ಇನ್ನೊಂದು ಹೆಸರು ದಿ.ಕಿ.ರಂ.ನಾಗರಾಜ್ ಅವರ ನೀಗಿಕೊಂಡ ಸಂಸ, ಕಾಲಜ್ಞಾನಿಕನಕ ನಾಟಕಗಳು ಗಮನಾರ್ಹ ಕೃತಿಗಳು. ಒಂದು ಕಾಲಘಟ್ಟದಲ್ಲಿ ಬೆಂಗಳೂರಿನ ಹವ್ಯಾಸಿ ರಂಗಭೂಮಿಗೆ ಪ್ರೇರಕರಾಗಿದ್ದವರು. ಇವರು ನೀಗಿಕೊಂಡ ಸಂಸ ಕನ್ನಡದ ಪ್ರಸಿದ್ಧ ನಾಟಕಕಾರ 'ಸಂಸ'ರ ಜೀವನವನ್ನು ಕುರಿತದ್ದಾದರೆ ಕಾಲಜ್ಞಾನಿಕನಕ ಕನಕದಾಸರ ಜಯಂತ್ಯುತ್ಸವ ಸಂದರ್ಭಕ್ಕೆ ಸಿದ್ಧಪಡಿಸಿ ಹಲವು ಪ್ರದರ್ಶನ ಕಂಡ ನಾಟಕ.

ಅಣ್ಣಾಜಪ್ಪ ಗುಂಜೇವು ಅವರ ಸುವರ್ಣ, ಮುತ್ತಿನಂಥ ಮಗ, ಅಡ್ಡದಾರಿ, ಅಪಮಾರ್ಗ ನಾಟಕಗಳು ಹಲವು ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಬಹುಮಾನಗಳಿಸಿವೆ. ಅಲ್ಲದೆ ಶ್ರೀಮತಿ ಮಂಗಳಾಸತ್ಯನ್ ಕೆಲ ನಾಟಕಗಳನ್ನು ಬರೆದಿದ್ದಾರೆ.

ಮಳಲಿ ವಸಂತ ಕುಮಾರ್ ಅವರು 'ಸತ್ಯವಾನ್ ಸಾವಿತ್ರಿ'ಯ ಕಥಾವಸ್ತುವನ್ನಾಧರಿಸಿದ 'ಯಮಧರ್ಮ' ಎಂಬ ನಾಟಕವನ್ನೂ ರಾಮಾಯಣದ ಕಥಾವಸ್ತುವನ್ನಾಧರಿಸಿದ 'ಲಂಕೇಶ್ವರ' ಎಂಬ ನಾಟಕವನ್ನೂ ಬರೆದಿದ್ದಾರೆ. ಶಶ್ವಿಷ್ಟೆ ಅವರ ಇತ್ತೀಚಿನ ನಾಟಕ.

ಜ.ಹೊ.ನಾರಾಯಣಸ್ವಾಮಿ ಅವರು 'ನರಬಲಿ' ಎಂಬ ನಾಟಕ ರಚಿಸಿದ್ದಾರೆ. ಶತಮಾನಗಳಿಂದ ಬಂದಿರುವ ಮೂಢನಂಬಿಕೆಗಳಿಗೆ ಸವಾಲು ಹಾಕುವ ಈ ನಾಟಕದ ವಸ್ತು ವೈಚಾರಿಕ ಪ್ರಜ್ಞೆಯಿಂದ ಕೂಡಿದುದಾಗಿದೆ. ಶತಮಾನಗಳಿಂದ ಅಕ್ಷರ ಜ್ಞಾನದಿಂದ ವಂಚಿತವಾದ ಒಂದು ವರ್ಗದ ಅಕ್ಷರ ಅಪೇಕ್ಷೆಯನ್ನು ಒಂದು ರಾಜಾಜ್ಞೆ ಮೂಲಕ ಈಡೇರಿಸ ಹೊರಟ 'ವೇನ' ಎಂಬ ಮಹಾರಾಜನ ಪ್ರಯತ್ನವನ್ನು ವಿಫಲಗೊಳಿಸಿದ ಪುರೋಹಿತಶಾಹಿ ಕಡೆಗೆ ಅವನನ್ನೇ ಹೇಗೆ ಬಲಿ ತೆಗೆದುಕೊಂಡಿತು ಎಂಬುದನ್ನು ಈ ನಾಟಕ ವೈಚಾರಿಕವಾಗಿ ಕಟ್ಟಿಕೊಡುತ್ತಾರೆ.

ಸಕಲೇಶಪುರದ ಗ್ರಂಥಾಲಯದಲ್ಲಿದ್ದ ದಿ.ಚಂದ್ರಶೇಖರ ಧೂಲೇಕರ್ ಅವರು ನರಸಿಂಹನಾಯಕ, ಕತ್ತಲೆ ಊರಿನ ಬೆತ್ತಲೆ ಕತೆ, ಶಕುನಿಪುರದ ರಾಜಕೀಯ ಮುಂತಾದ ನಾಟಕಗಳನ್ನು ಬರೆದಿದ್ದಾರೆ.

ನಾಟಕ ರಚನೆ, ರಂಗಭೂಮಿ ಮೂಲಕ ತಮ್ಮನ್ನು ಗುರುತಿಸಿ ಕೊಂಡಿರುವ ಡಾ.ಚಂದ್ರು ಕಾಳೇನಹಳ್ಳಿ 'ಎಲ್ಲರೂ ನಮ್ಮವರೆ', 'ಕಳಕೊಂಡವರು', 'ಮಾಯಾ ಕಿನ್ನರಿ', 'ಕಲಿವೀರ ಜುಂಜಪ್ಪ', 'ಎಲ್ಲಿ ಮೋಹನ ಮುರಲಿ' ಮುಂತಾದ ನಾಟಕಗಳನ್ನು ಬರೆದಿದ್ದಾರೆ.

ಇವರ “ಕಳಕೊಂಡವರು' ರಾಜಕೀಯ ವಿಡಂಬನೆಯ ಒಂದು ಅಸಂಗತ ನಾಟಕ, ರಾಜಕಾರಣಿ, ಅಧಿಕಾರಿಗಳ ಭ್ರಷ್ಟತೆಯಲ್ಲಿ ಪ್ರಜ್ಞಾವಂತ ನಾಗರಿಕ ಹೇಗೆ ಮುಖ ಹೀನನಾಗಿ ಕಳೆದು ಹೋಗುತ್ತಾನೆಂಬುದನ್ನು ವಿಡಂಬಿಸುತ್ತದೆ. ಮಾಯಾಕಿನ್ನರಿ ಜಾನಪದ ಸತ್ವಮೈಗೂಡಿಸಿ ಹುಟ್ಟಿಕೊಂಡ ನಾಟಕ. ವಿವಾದ ಗೋಜಲಿಗೆ ಸಿಕ್ಕಿದ ರಾಜನೊಬ್ಬ ಸತ್ಯಾನ್ವೇಷಣೆಗೆ ಮಾರ್ಗಗಳನ್ನು ಹುಡುಕುತ್ತಾ ಹೋಗಿ ಸತ್ಯದ ಪರಾಕಾಷ್ಟೆಗೆ ತಲುಪಿರುವೆನೆಂದು ಬೀಗುತ್ತಿರುವ ಮಾಂತ್ರಿಕ ಜೋಗಿಯ ಮೊರೆ ಹೋಗುತ್ತಾನೆ. ಆನಂತರ ಅವನಿಗೇ ಸತ್ಯದರ್ಶನವಾಗಿಲ್ಲ ಎಂಬ ಅರಿವು ಅವನಿಗಾದಾಗ ಆ ಜೋಗಿಯನ್ನೇ ತನ್ನರಮನೆಗೆ ಕರೆದು ಸತ್ಯದರ್ಶನ ಮಾಡಿಸುತ್ತಾನೆ. ಸತ್ಯದ ಒಳಸುಳಿ ಕಂಡು ಇಬ್ಬರಿಗೂ ಅಚ್ಚರಿ ಮೂಡಿ ಅವರು ವೈರಾಗ್ಯಕ್ಕೆ ತೆರಳುವುದೇ ಇದರ ವಸ್ತು. ಎಲ್ಲಿ ಮೋಹನ ಮುರಲಿ ಮಹಾಭಾರತದ ಮೌಸಲಪರ್ವ ಆಧರಿಸಿ ಹುಟ್ಟಿಕೊಂಡ ನಾಟಕ, 'ದೇವಿ' ಅವರ ಇತ್ತೀಚಿನ ನಾಟಕ.

ರಂಗಭೂಮಿಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುವ ನಂಜುಂಡಮ್ಮೈಮ್ ಕಾಲೇಜು ದಿನಗಳಿಂದಲೇ ನಾಟಕದ ಗೀಳು ಅಂಟಿಸಿಕೊಂಡು ಸ್ನೇಹಿತರ ಜತೆಗೂಡಿ 'ನಗೀನ್ ಅಹಮದ್ ಅವರ 'ಅಂತರ ನಿರಂತರ' ನಾಟಕದ ಮೂಲಕ ರಂಗಭೂಮಿಗೆ ಬಂದರು. ೧೯೭೯ರಲ್ಲಿ ನಿರಂತರ ಕಲಾವಿದರು' ಎಂಬ ತಂಡ ಕಟ್ಟಿ ನಿರಂತರ ರಂಗ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಇದುವರೆಗೆ ಹದಿನೈದು ನಾಟಕಗಳು ಪ್ರಕಟಣೆಗೊಂಡಿವೆ.

ಇವರು ರಂಗಭೂಮಿಯಲ್ಲಿ ವಿಭಿನ್ನ ನಾಟಕ ಪ್ರಯೋಗಗಳನ್ನು ಮಾಡಿದ್ದಾರೆ. ೧೯ ಸೆಕೆಂಟ್‌ನ 'ಸ್ಫೋಟ' ನೀರಿನ ಮೇಲೆ ಪ್ರದರ್ಶಿಸಿದ ಮುಖಗಳು, ತೊಟ್ಟಿಲಲ್ಲಿ ಪ್ರದರ್ಶಿಸಿದ ಧ್ವಜದ ಹಿಂದೆ, ಕೃತಕ ಮಳೆಯಲ್ಲಿ ಪ್ರದರ್ಶಿಸಿದ ಮೌನ, ಬೆಂಕಿಯ ನಡುವೆ ಪ್ರದರ್ಶಿಸಿದ ವಿಕೇಂದ್ರೀಕರಣ ಇವರ ಪ್ರಮುಖ ನಾಟಕಗಳು. ಅಮ್ಮಾ ದಾಖಲೆಯಲ್ಲಿ ಸೇರ್ಪಡೆಯಾಗಿವೆ.

ಇಂದಿನ ಸಮಾಜದ ವರದಕ್ಷಿಣೆ, ಲಂಚ, ಸಾಮಾಜಿಕ ವಿಘಟನೆ ಮುಂತಾದ ವಿಚಾರಗಳು ಇವರ ನಾಟಕದ ವಸ್ತು. ರಾಜಕೀಯ ವಿಡಂಬನೆ ಇವರ ನಾಟಕಗಳಲ್ಲಿ ಕಾಣುವ ವಸ್ತು. ಡಾ.ದೊಡ್ಡರಂಗೇಗೌಡ, ಎ.ಎನ್.ನಾಗೇಶ್ ನಗೀನ್ ಅಹಮದ್ ಮುಂತಾದವರು ಇವರ ನಾಟಕದ ಬಗ್ಗೆ ಪ್ರಶಂಸನಾತ್ಮಕ ಮಾತುಗಳನ್ನಾಡಿದ್ದಾರೆ. ಅತ್ಯಂತ ಸರಳವಾದ ದೇಸಿ ನುಡಿಯಲ್ಲಿ ಹೃದಯ ತಟ್ಟುವಂತೆ ನಾಟಕ ಕಟ್ಟುವ ಜಾಣೆ ಇವರದು.

ರಂಗಭೂಮಿ ಮೂಲಕ ಗುರುತಿಸಿಕೊಂಡು ಈಗ ಚಲನಚಿತ್ರ ಹಾಗೂ ಕಿರುತೆರೆಯಲ್ಲಿ ಹೆಸರು ಮಾಡಿರುವ ನಾಗರಾಜ್ ಕೋಟೆ ಚಿಕ್ಕಂದಿನಿಂದಲೂ ಬರೆಯುವ ಗೀಳು ಅಂಟಿಸಿಕೊಂಡ ಇವರು 'ಗುರು ಜ್ಯೋತಿ ಕಲಾಸಂಗಮ' ಎಂಬ ತಮ್ಮ ಗೆಳೆಯರ ತಂಡ ಕಟ್ಟಿಕೊಂಡು ಅನೇಕ ನಾಟಕಗಳನ್ನು ರಂಗದ ಮೇಲೆ ತರುವುದರ ಜೊತೆಗೆ ಸ್ವತಃ ಅನೇಕ ನಾಟಕಗಳನ್ನು ರಚಿಸಿ ಯಶಸ್ವಿಯಾಗಿ ರಂಗದ ಮೇಲೆ ತಂದಿದ್ದಾರೆ. ಇವರು ಭವಿಷ್ಯ, ಕೂಗು, ಹೆಣಗಳು, ನಾಟಕಗಳನ್ನು ಬರೆದು ತಮ್ಮ ತಂಡಕ್ಕೆ ನಿರ್ದೇಶಿಸಿದ್ದಾರೆ. ಅನೇಕ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದಾರೆ.

ಅವರು ಇತ್ತೀಚೆಗೆ ಪ್ರಕಟಿಸಿರುವ 'ನಾಲ್ಕು ನಾಟಕಗಳು' ಎಂಬ ಕೃತಿಯಲ್ಲಿ ಅವರ ಶಾಂತಿಪಾರ್ಕ್, ಜೋಗಿಯ ರಾಣಿ, ದ್ವಂದ್ವ ಕನಸು ಎಂಬ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಸ್ವಲ್ಪಸ್ವಲ್ಪ ತಾಲೀಮು ಮಾಡಿದವರೂ ಸುಲಭವಾಗಿ ರಂಗದ ಮೇಲೆ ಪ್ರದರ್ಶಿಸಬಹುದಾದಷ್ಟು ಚೊಕ್ಕ ನಾಟಕಗಳನ್ನು ನೀಡಿರುವುದು ಇವರ ವೈಶಿಷ್ಟ್ಯ. ೨೦೦೫ರಲ್ಲಿ ಇವರು ತಮ್ಮ ನೆಲೆ ಎಂಬ ನಾಟಕವನ್ನು ಮರದ ಮೇಲೆ ಪ್ರದರ್ಶಿಸಿ ಅಮ್ಮಾ ದಾಖಲೆಗೆ ಪಾತ್ರರಾಗಿದ್ದಾರೆ. ಸಾಹಿತಿಗಳಾದ ಮಲ್ಲೇಪುರಂ ಜಿ.ವೆಂಕಟೇಶ, ಕುಂ.ವೀ., ಎಸ್.ಜಿ.ಸಿದ್ದರಾಮಯ್ಯ, ಶ್ರೀಮತಿ ಲಕ್ಷ್ಮೀ ಚಂದ್ರಶೇಖರ್ ಮುಂತಾದವರು ಇವರ ನಾಟಕಗಳ ಬಗೆಗೆ ಹಾಗೂ ರಂಗ ಪ್ರಯೋಗಗಳ ಬಗೆಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. “ಈ ನಾಲ್ಕು ನಾಟಕಗಳು ವರ್ತಮಾನದ ಮಾನವ ಸಮುದಾಯದ ಬದುಕಿನ ಬವಣೆಗಳನ್ನೂ, ಆತಂಕಗಳನ್ನೂ ತಲ್ಲಣಗಳನ್ನೂ ಒಳಗೊಂಡಿವೆ. ಈ ಬವಣೆ, ಆತಂಕ, ತವಕ, ತಲ್ಲಣಗಳಿಗೆ ತಾತ್ವಿಕತೆಯನ್ನು ನಿರ್ಮಿಸುವ ಗುರಿಯನ್ನು ನಾಟಕಕಾರರು ಹೊಂದಿಲ್ಲ. ಅದು ಮಾತಿನ ಅಭಿನಯದಿಂದ ಪ್ರೇಕ್ಷಕರಲ್ಲಿ ಒಡಮೂಡಬೇಕು” (ಮಲ್ಲೇಪುರಂ ಜಿ.ವೆಂಕಟೇಶ ನಾಲ್ಕು ನಾಟಕಗಳ ಬೆನ್ನುಡಿಯಿಂದ) ಇವರ ನಿರ್ದೇಶನದ ಬಾನಾಡಿ ಚಲನಚಿತ್ರ ಏಷ್ಯನ್ ಪನೋರಮಾದ ೧೯ನೇ ಮಕ್ಕಳ ಚಿತ್ರೋತ್ಸವಕ್ಕೆ ಆಯ್ಕೆಯಾಗಿರುವುದು ಒಂದು ವಿಶೇಷ.

ಇವರಲ್ಲದೆ ಎ.ಜಿ.ರಾಜು 'ಭುವನ ಸಾರ್ವಭೌಮ' ಎಂಬ ನಾಟಕವನ್ನು ಬರೆದಿದ್ದಾರೆ. ಬೇರೆ ಬೇರೆ ರಾಜ್ಯಗಳಲ್ಲಿನ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ನಾಟಕ ಬಹುಮಾನಗಳನ್ನು ಪಡೆದಿದ್ದಾರೆ.

ಕೋಟೆಯ ಲಾಯರ್ ನಾಗರಾಜು ಸ್ವತಃ ರಂಗ ನಟರಾಗಿ ಗುರುತಿಸಿಕೊಳ್ಳುವುದರ ಜೊತೆಗೆ ತಮ್ಮದೇ ರಂಗ ತಂಡ ಕಟ್ಟಿ ಮಕ್ಕಳ ನಾಟಕ ಪ್ರದರ್ಶಿಸಿದ್ದಾರೆ. ತಾವೇ ನಾಟಕ ಬರೆದು ರಂಗದ ಮೇಲೆ ತಂದಿದ್ದಾರೆ.

ಹವ್ಯಾಸಿ ರಂಗಭೂಮಿಯಲ್ಲಿ ಗುರುತಿಸಿಕೊಂಡು ಕೆಲಸ ಮಾಡಿದ ಕಲಾವಿದರ ಸಮೂಹವೇ ಚನ್ನರಾಯಪಟ್ಟಣದಲ್ಲಿದೆ. ಒಂದು ಕಾಲಘಟ್ಟದಲ್ಲಿ ಚನ್ನರಾಯಪಟ್ಟಣದಲ್ಲಿ ಪದವಿ ಕಾಲೇಜು, ಶಿಕ್ಷಣ ಕಾಲೇಜು ಆರಂಭವಾದ ಹೊಸತರಲ್ಲಿ ಅನೇಕ ಕಾಲೇಜು ಅಧ್ಯಾಪಕರು ರಂಗಭೂಮಿಯಲ್ಲಿ ತೊಡಗಿಸಿಕೊಂಡು ಮೃಚ್ಛಕಟಿಕ, ಕೆರೆಗೆಹಾರ, ಬೆಂಗಳೂರು ಕೆಂಪೇಗೌಡ ಮುಂತಾದ ನಾಟಕಗಳನ್ನು ಅಭಿನಯಿಸಿದ್ದಾರೆ. ಪ್ರೊ.ಸಿದ್ದೇಗೌಡ, ಪ್ರೊಮೇಲಗಿರಿಗೌಡ, ಪ್ರೊ.ಎಸ್.ಬಿ.ಶಿವಕುಮಾರ್, ಪ್ರೊ.ಕೆ.ಕುಮಾರ್, ಕೆ.ಸ್ವಾಮಿಗೌಡ, ಇ.ನಾಗಣ್ಣ ನಾರಾಯಣ್, ರವಿ, ದೇವರಾಜ್, ಶ್ರೀಮತಿ ಯಶೋದಮ್ಮ, ಆರ್.ಕೆ.ಶಿವಪ್ಪ, ಜೆ.ಎಸ್.ನಂಜುಂಡೇಗೌಡ, ಡಿ.ಎಂ.ಕೃಷ್ಣ ಮುಂತಾದವರಲ್ಲಿ ಹೆಸರಿಸಬಹುದು.

ಒಂದು ಕಾಲಕ್ಕೆ ಕಾಲೇಜು ರಂಗಭೂಮಿ ಚನ್ನರಾಯಪಟ್ಟಣದಲ್ಲಿ ಸಕ್ರಿಯವಾಗಿದ್ದು ಡಾ. ಚಂದ್ರು ಕಾಳೇನಹಳ್ಳಿ ಮೂಲಕ ಗುರುತಿಸಿಕೊಂಡು ಅನೇಕ ಕಾಲೇಜು ನಾಟಕ ಸ್ಪರ್ಧೆಗಳಲ್ಲಿ ನಾಟಕೋತ್ಸವಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿ ಕಲಾವೃಂದವೇ ಒಂದು ಕಾಲಕ್ಕೆ ಸಕ್ರಿಯವಾಗಿತ್ತು. ಆಗ ಮೊದಲಿಗೆ ರಂಗ ಚಟುವಟಿಕೆಯಲ್ಲಿದ್ದವರೆಂದರೆ ದೊಡ್ಡರಿ ಶ್ರೀಕಂಠ, ತಿಮ್ಮಯ್ಯ, ನರಸಿಂಹೇಗೌಡ, ದೇವನಾಗೇಶ್, ಅಥೇನಹಳ್ಳಿ ಚಂದ್ರು, ಪುಟ್ಟೇಗೌಡ, ಸತ್ತೀಗೌಡ, ಶಿವಣ್ಣ, ಲಿಂಗರಾಜು, ಶಶಿ, ನಾಗರಾಜ್ (ಲಾಯರ್) ಮುರಳಿ, ನಟರಾಜು, ನಾಸಿಂಗು, ಚೇತನ, ಸಿರಾಜ್, ಇನ್ನೂ ಮುಂತಾದವರೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಈಗ ಹಂಚಿಹೋಗಿದ್ದಾರೆ.

ಆನಂತರದ ದಿನಗಳಲ್ಲಿ ಕೆ.ಎ. ಬಲರಾಮೇಗೌಡ, ದೇವನಾಗೇಶ, ದೇವರಾಜು, ಮೋಹನ್ ಮಟ್ಟಿನವಿಲೆ, ನಂ.ಪಾರ್ಥ, ಹೊನ್ನಶೆಟ್ಟಿ, ಮಿಲ್ರಿ ಮಂಜು, ಸುರೇಶ್ ಕಬ್ಬಾಳು, ಕವಿತ, ಆಶಾ, ಗೋವಿಂದರಾಜ್ ದಿಂಡಗೂರು, ಮುಂತಾದವರನ್ನು ನೆನೆಯಬಹುದು. ಅದರಲ್ಲೂ ಶಿವಶಂಕರ್, ಧನಂಜಯ ದಿಡಗ, ಸಂತೋಷ್ ರಿಂಡಗೂರು ಮುಂತಾದವರು ಜನಪದ ರಂಗಮಾಧ್ಯಮದ ಮೂಲಕ ಗುರುತಿಸಿಕೊಂಡು ನಿನಾಸಂ ತರಬೇತಿ ಪಡೆದು ಇಂದು ಕರ್ನಾಟಕದ ವಿವಿಧೆಡೆ ರಂಗಭೂಮಿ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ.

ಚನ್ನರಾಯಪಟ್ಟಣದ ಜನಪದ ರಂಗಮಾಧ್ಯಮದ ಸಹಯೋಗದಲ್ಲಿ ಪ್ರಸಿದ್ಧ ರಂಗನಿರ್ದೇಶಕರುಗಳಾದ ಸಿ.ಬಸವಲಿಂಗಯ್ಯ, ಜೀವನ್‌ರಾಂ ಸುಳ್ಯ, ಕೃಷ್ಣಮೂರ್ತಿ ಕವತಾರ್ ಮುಂತಾದ ರಂಗ ನಿರ್ದೇಶಕರು ರಂಗ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. ಅಭಿನಯಕ್ಕಾಗಿ ಅನೇಕ ನಾಟಕ ಸ್ಪರ್ಧಾ ಪ್ರಶಸ್ತಿ ಪಡೆದಿದ್ದಾರೆ.

ಚನ್ನರಾಯಪಟ್ಟಣದ ಮೊದಲಹಂತದ ರಂಗ ತಂಡಗಳಿಂದ ಪ್ರೇರಣೆಗೊಂಡು ತಾವೇ ಸ್ವತಃ ರಂಗತಂಡ ಕಟ್ಟಿ ಅನೇಕ ಸ್ಪರ್ಧಾ ನಾಟಕಗಳ ಮೂಲಕ ರಾಜ್ಯದಾದ್ಯಂತ ಹೆಸರು ಮಾಡಿದ ಕಲಾತಂಡಗಳೂ ಸಾಕಷ್ಟಿವೆ. ಮೋಹನ್ ಮಟ್ಟನವಿಲೆಯ 'ನಾವುನೀವು' ಕಲಾ ತಂಡವೂ ಕೆಲ ರಂಗಪ್ರಯೋಗಗಳನ್ನು ನಡೆಸಿ ಸಾಕಷ್ಟು ಸುದ್ದಿ ಮಾಡಿತು. ಬೇರೆ ಬೇರೆ ಕಲಾ ತಂಡಗಳನ್ನು ಕರೆಸಿ ನಾಟಕ ಪ್ರದರ್ಶನ ನಡೆಸುತ್ತಿದೆ. ಇವರ ನೇತಾರ ಮೋಹನ್ ಮಟ್ಟನವಿಲೆ. ಸ್ವತಃ ನಾಟಕ ರಚನಾಕಾರರೂ ಹೌದು.

ಹಾಗೆಯೇ ಚನ್ನರಾಯ ಪಟ್ಟಣದ ಹವ್ಯಾಸಿ ಕಲಾತಂಡಗಳ ಮೂಲಕ ಗುರುತಿಸಿಕೊಂಡು ಅನೇಕ ರಂಗಭೂಮಿಯ, ಕಿರುತೆರೆಯ ಕಲಾವಿದರಾಗಿ ಹೋಗಿದ್ದಾರೆ. ಒಂದು ಕಾಲಕ್ಕೆ ಸುರೇಶ ಬೇತಂಚರ್ಲ ಎಂಬ ಕಲಾವಿದರ ಮೂಲಕ ಗುರುತಿಸಿಕೊಂಡ ಸ್ಟುಡಿಯೋ ಆನಂದ್, ನಂಜುಂಡ ಮೈಮ್, ನಜೀರ್, ನಂತರ ಕೆಲ ನಾಟಕ ರಚಿಸಿದ ಮುನಿರಾಜು, ಲಿಂಗರಾಜು, ಸುರೇಶ ಅವರಲ್ಲಿ ಮುಖ್ಯರಾದವರು. ಈ ಕಲಾಸಂಪದದ ನಂತರ ಜನ್ಮ ತಳೆದ ನಂಜುಂಡ ಮೈಮ್ ತಂಡದಲ್ಲಿ ನಗೀನ್ ಅಹಮದ್ ಎಂಬ ಪ್ರತಿಭಾವಂತರು ಕೆಲಸ ಮಾಡಿದರು. ಈ ತಂಡದ ಸರವಣಕುಮಾರ್ ಕುಟಿ, ಟೆಲಿಕಾಂ ನಾಗರಾಜು, ಶಿವಶಂಕರಪ್ಪ, ಜಿ.ಆರ್.ಮೋಹನ್ ಜ್ಯೋತಿಲಕ್ಷ್ಮಿ ಮುಂತಾದವರು ಗುರುತಿಸಿಕೊಂಡು ಕೆಲಸ ಮಾಡಿದರು.

ಸೃಷ್ಟಿ ಎಂಬ ಕಲಾತಂಡವನ್ನು ಕಟ್ಟಿಕೊಂಡು ಕೆಲಸ ಮಾಡಿದ ಎ.ಜಿ.ರಾಜು, ಲೋಕೇಶ್, ಮುಕುಂದ, ಈಶ್ವರ್, ಕಾಳೇನಹಳ್ಳಿ ಮುಂತಾದವರು ಮುಖ್ಯರಾಗಿದ್ದಾರೆ.

ಗುರುಜ್ಯೋತಿ ಕಲಾ ಸಂಗಮದಲ್ಲೂ ನಾಗರಾಜ್ ಕೋಟೆ ನೇತೃತ್ವದಲ್ಲಿ ಗುರುತಿಸಿಕೊಂಡ ಕಲಾವಿದರಾದ ರಾಜು ಟೈಲರ್, ಮಂಜು ಹೆಬ್ಬಾರ್ ಪುರಸಭಾಧ್ಯಕ್ಷ ನಟರಾಜು, ಸಿ.ಎಂ.ನಾಗೇಶ್, ಶೇಖರ್ ಹೆಬ್ಬಾರ್, ಪ್ರಶಾಂತ್, ಡಿ.ಎಂ.ಕುಮಾರ್ ಮುಂತಾದವರು ಮುಖ್ಯರಾಗಿದ್ದಾರೆ.

ಹಾಗೆಯೇ ಜನಪದ ರಂಗ ಮಾಧ್ಯಮದ ಜೊತೆ ಕಾಳೇನಹಳ್ಳಿ ನಾರಾಯಣ್ ನಿರಂತರವಾಗಿ ಗುರುತಿಸಿಕೊಂಡು ಕೆಲಸ ಮಾಡಿದ್ದಾರೆ.

ವೃತ್ತಿಯಲ್ಲಿ ಸರ್ಕಾರಿ ನೌಕರರೂ, ಪ್ರವೃತ್ತಿಯಲ್ಲಿ ನಾಟಕಕಾರ, ನಟ ಸಾಹಿತಿ, ನಿರ್ದೇಶಕ ಎಲ್ಲವೂ ಆಗಿರುವ ಶ್ರೀ ಗೊರೂರು ಅನಂತರಾಜು ಅವರು ಕಳೆದ ಎರಡು ದಶಕಗಳಿಂದ ತೊಡಗಿಸಿಕೊಂಡಿದ್ದಾರೆ. ತಾವು ನೋಡಿದ ಐವತ್ತಕ್ಕೂ ಹೆಚ್ಚು ರಂಗಪ್ರಯೋಗಗಳ ರಂಗ ವಿಮರ್ಶೆಗಳನ್ನು ಮಾಡಿದ ಹೆಗ್ಗಳಿಕೆ ಇವರದು. ಇವರು ವಿಮರ್ಶಿಸಿ ಪತ್ರಿಕೆಗಳಲ್ಲಿ ಬೆಳಕು ಕಂಡಿರುವ 'ವಿಮರ್ಶಾ ಸಂಕಲನ'ವನ್ನು ಪ್ರಕಟಿಸಿದ್ದಾರೆ. -

ಗೊರೂರು ಅನಂತರಾಜು ವ್ಯವಸ್ಥೆ' 'ವೀರಪ್ಪನ್ ಭೂತ' 'ಕುಂಟನಾಯಿ' ಎಂಬ ನಾಟಕಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಹಾಗೂ ನಾಟಕಕ್ಕಾಗಿ



ಇದುವರೆಗೆ ಅನೇಕ ಪ್ರಶಸ್ತಿಗಳು ಸಂದಿವೆ. ಹಲವಾರು ಸನ್ಮಾನಗಳು ದೊರಕಿವೆ.

ದಿ. ಚಂದ್ರಶೇಖರ ಧೂಲೇಕರ್ ಒಂದು ಕಾಲಕ್ಕೆ ನಾಟಕ, ಇತಿಹಾಸ, ಸಾಹಿತ್ಯ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದವರು. ಇವರ ನರಸಿಂಹ ನಾಯಕ, ಕತ್ತಲೆ ಊರಿನ ಬೆತ್ತಲೆ ಕತೆ, ಶಕುನಿಪುರದ ರಾಜಕೀಯ ಮುಂತಾದ ನಾಟಕಗಳನ್ನು ಬರೆದಿದ್ದಾರೆ. ಇವರ ನಾಟಕಗಳನ್ನು ಅನೇಕ ರಂಗ ತಂಡಗಳು ತೆಗೆದುಕೊಂಡು ಪ್ರದರ್ಶಿಸಿ ಅನೇಕ ಬಹುಮಾನಗಳನ್ನು ಸ್ಪರ್ಧೆಯಲ್ಲಿ ಗಳಿಸಿವೆ.

ಮಂಜಪ್ಪ ಹೆನ್ನಿ, ಸಕಲೇಶಪುರದ ಸಿದ್ಧಿ ವಿನಾಯಕ ಕಲಾಸಂಘದ ಸಂಸ್ಥಾಪಕರಲ್ಲೊಬ್ಬರಾದ ಇವರು 'ಮಗನ ತಿಂದ ಮಾರಾಯ' ಒಡಹುಟ್ಟಿದ ಸಹೋದರ, ರಕ್ತಪರೀಕ್ಷೆ ಎಂಬ ನಾಟಕಗಳನ್ನು ಬರೆದಿದ್ದಾರೆ.

ಓಬಳೇಶ ಘಟ್ಟಿ ಸಕಲೇಶಪುರದ ಶಿಕ್ಷಣ ಕಾಲೇಜಿನ ಪ್ರಾಧ್ಯಾಪಕರು, ಇವರ ಪ್ರಮುಖ ನಾಟಕಗಳು 'ವಿಷಜ್ವಾಲೆ' 'ರಕ್ತದೋಕುಳಿ' ಹಾಗೂ ಗಂಡ ಎಂಬ ನಾಟಕಗಳನ್ನು ಬರೆದಿದ್ದಾರೆ.

ಪ್ರಸಾದ್ ರಕ್ಷಿದಿ ಹಾಸನ ಜಿಲ್ಲೆಯ ರಂಗಭೂಮಿಯ ಇನ್ನೊಂದು ಪ್ರಸಿದ್ಧ ಹೆಸರು. ಬೆಳ್ಳೇಕೆರೆಯ 'ಜೈಕರ್ನಾಟಕ ಸಂಘ'ದ ಸ್ಥಾಪಕ ಸದಸ್ಯರಾದ ಇವರು ರಚಿಸಿರುವ ನಾಟಕಗಳಲ್ಲಿ 'ನಮ್ಮ ಎಲುಬುಗಳ ಮೇಲೆ, ಮಾಯಾಮೃಗ, ಭೀಮಣ್ಣನ ಕಥಾಪ್ರಸಂಗ, ಇಂಡಿಯಾ ೧೯೯೧, ಪ್ಲಾಂಟರ್ ಪರಮೇಶಿ (ಫ್ರೆಂಚ್ ನಾಟಕಕಾರ ಮೋಲಿಯೇರ್‌ನ ಭೂರ್ಜ್ವಾಜಂಟಲ್‌ಮನ್‌ನ ರೂಪಾಂತರ), ಧನ್ವಂತರಿ ಚಿಕಿತ್ಸೆ (ಕುವೆಂಪು ಕಥೆ ಆಧಾರಿತ) ಹಾಗೂ ಚಂದ್ರಮಂಡಲ ಎಂಬ ನಾಟಕಗಳನ್ನು ಬರೆದಿದ್ದಾರೆ. ಇವರು ಬರೆದ 'ಬೆಳ್ಳೇಕೆರೆ ಹಳ್ಳಿ ಥಿಯೇಟರ್" ಕೃತಿ ಹಾಸನ ಜಿಲ್ಲೆಯ ರಂಗ ವಿಮರ್ಶಾ ಕೃತಿಗಳಲ್ಲಿ ಒಂದು. ಇದು "ಕರವೇ' ಪತ್ರಿಕೆಯಲ್ಲಿ ಧಾರಾವಾಹಿ ರೂಪದಲ್ಲೂ ಪ್ರಕಟವಾಯಿತು. ಮಲೆನಾಡಿನ ಭಾಗದ ರೈತರ, ಕಾರ್ಮಿಕರ, ಬದುಕಿನ ಬವಣೆಗಳನ್ನು, ಪ್ರಾಣಿಗಳಿಂದ ಪರಿಸರ ಅಸಮತೋಲನದಿಂದ ಪರಿಪಾಟಲು ಪಡುವ ಬದುಕನ್ನು ರಂಗಭೂಮಿಯಲ್ಲಿ ಯಶಸ್ವಿಯಾಗಿ ತಂದಿದ್ದಾರೆ. ಇವರ ಕೃತಿಗಳಲ್ಲಿ ಪೂರ್ಣಚಂದ್ರ ತೇಜಸ್ವಿ ಅವರ ಪ್ರಭಾವವನ್ನು ಕಾಣಬಹುದು.

ಕವಿ ಸುಬ್ಬು ಹೊಲೆಯಾರ್ ನೀನಾಸಂನಿಂದ ರಂಗ ಶಿಕ್ಷಣ ಪಡೆದು ಈಗ ಬೆಂಗಳೂರು ದೂರದರ್ಶನದಲ್ಲಿದ್ದಾರೆ. ಅವರು ಬರೆದ 'ಪಂಪನಿಂದ ಮಾದೇವರ ವರೆಗೆ' ನಾಟಕ ಬರೆದಿದ್ದಾರೆ.

ಎಚ್.ಎಂ.ಕುಮಾರಸ್ವಾಮಿ ಸಕಲೇಶಪುರದ ಎಳಸೂರಿನವರಾದ ಕುಮಾರಸ್ವಾಮಿ "ಅಭಿನಯ ಸುಳ್ಯ'ದ ಸ್ಥಾಪಕ ಸದಸ್ಯರು. ಇವರು 'ಬಂಕಾಪುರದ ಬಯಲಾಟ', 'ಮಾಯಾಸೇತುವೆ', 'ವಿಚಿತ್ರೇಶ್ವರನ ಜಾತ್ರೆ' (ಇದು ಆಕಾಶವಾಣಿ ರಾಷ್ಟ್ರೀಯ

ಕಾರ್ಯಕ್ರಮದಡಿಯಲ್ಲಿ ಹಿಂದಿಯಿಂದ ಭಾಷಾಂತರಿಸಿದ ನಾಲ್ಕು ನಾಟಕಗಳ ಸಂಗ್ರಹ) "ಭಾರತೇಂದು ಭಾರತ' ಮತ್ತು ಮಕ್ಕಳ ನಾಟಕಗಳಾದ ಹೊರೆಕಾಣಿಕೆ, ನೀನನಗಿದ್ದರೆ ನಾನಿನಗೆ, ಮುಂತಾದುವು ಮುಖ್ಯವಾದುವು.

ಭದ್ರಪ್ಪಣಿ, ಹೆನ್ಲಿ, ಇವರು ಸಕಲೇಶಪುರದ ಹೆನ್ನಲಿ ಗ್ರಾಮದವರು. ಮೈಸೂರು "ಸುರುಚಿ' ರಂಗಮನೆಯ ಸಕ್ರಿಯ ಸದಸ್ಯರು ಕಯೂರಿನ ಸತ್ಯಾಗ್ರಹಕ್ಕೆ ಸಂಬಂಧಿಸಿದ "ಕಯ್ಯಾರಿನ ಕಲಿಗಳು' ಎಂಬ ನಾಟಕ ರಚಿಸಿದ್ದಾರೆ.

ಚಂದ್ರಕಾಂತ ಪಡೇಸೂರು ಅವರು ರನ್ನನ ಗದಾಯುದ್ಧ ಹಾಗೂ ಪಂಪಭಾರತ ಆಧರಿಸಿ 'ಧೀರ ದುರ್ಯೋಧನ' ಎಂಬ ನಾಟಕ ಬರೆದಿದ್ದಾರೆ. ಗದಾಯುದ್ಧದಲ್ಲಿ ಕೃಷ್ಣನ ರಣತಂತ್ರದಿಂದ ಭೀಮನಿಂದ ದುರ್ಯೋಧನ ಸೋತು ವೀರಮರಣವನ್ನಪ್ಪುವ ಸನ್ನಿವೇಶವನ್ನು ನಾಟಕದ ವಸ್ತುವಾಗಿ ಬಳಸಿಕೊಳ್ಳಲಾಗಿದೆ. ಚಂದ್ರಕಾಂತ ಪಡೇಸೂರರು "ಇದಿಮಾಯಿ' ಎಂಬ ಇನ್ನೊಂದು ನಾಟಕವನ್ನು ರಚಿಸಿದ್ದಾರೆ. ವಿಧಿಲಿಖಿತದ ಮೇಲೆ ನಂಬಿಕೆಯನ್ನು ಆಶ್ರಯಿಸಿರುವ ಈ ನಾಟಕ ಹಲವೆಡೆ ಪ್ರದರ್ಶನ ಕಂಡಿದೆ.

ಎನ್.ಎಲ್.ಚನ್ನೇಗೌಡರು ಎರಡು ನಾಟಕಗಳನ್ನು ಬರೆದಿದ್ದಾರೆ. 'ದಕ್ಷಯಜ್ಞ ಎಂಬ ಪೌರಾಣಿಕ ವಸ್ತುವನ್ನು ಒಳಗೊಂಡ ನಾಟಕವನ್ನು ಬರೆದಿದ್ದಾರೆ. ಅಲ್ಲದೆ 'ಯುಕ್ತಿನ ಮೂಗುತಿ' ಎಂಬ ಐತಿಹಾಸಿಕ ನಾಟಕವನ್ನು ಬರೆದಿದ್ದಾರೆ. ಮೈಸೂರು ಅರಸರಲ್ಲಿ ಖ್ಯಾತರಾದ ರಾಜ ಒಡೆಯರ ಕಾಲದಲ್ಲಿ ನಡೆಯಿತೆನ್ನಲಾದ 'ಅಲಮೇಲಮ್ಮನ ಶಾಪದ ವಿಷಯವೇ ನಾಟಕದ ವಸ್ತು, ಈ ಐತಿಹಾಸಿಕ ವಿಷಯದ ಸುತ್ತ ಕಟ್ಟಿಕೊಂಡಿರುವ ಜಾನಪದ ಲಾವಣಿಯ ವಿಷಯವೇ ನಾಟಕದ ಕಥಾವಸ್ತು, ಅಲಮೇಳಮ್ಮ ಶ್ರೀರಂಗಪಟ್ಟಣದ ಆದಿರಂಗನ ಭಕ್ತೆ, ಈಕೆ ತಿರುಮಲನ ಪತ್ನಿ. ಈತ ಕದನದಲ್ಲಿ ಸೋತ ನಂತರ ಪತ್ನಿಯರೊಡನೆ ತಲಕಾಡಿನಲ್ಲಿ ನೆಲೆಸಿದ್ದನು. ಅವನು ಬೆನ್ನುಫಣಿಯಿಂದ ಅಸುನೀಗಿದಾಗ, ಅಲಮೇಲಮ್ಮ ಅವನ ಭಂಡಾರಕ್ಕೆ ಒಡತಿಯಾದಳು. ಅವಳ ಬಳಿಯಿದ್ದ ಮೂಗುತಿಯನ್ನು ರಂಗನಾಯಕಿ ವಿಗ್ರಹಕ್ಕೆ ಸಿಂಗರಿಸಿ ಸಂತಸಪಡುತ್ತಿದ್ದಳು. ಅದನ್ನು ಪಡೆಯಲು ರಾಜಒಡೆಯರು ಪ್ರತಿನಿಧಿಯನ್ನು ರಾಯಭಾರಿಗಳನ್ನು ಕಳುಹಿಸುತ್ತಾನೆ. ಅಲಮೇಲಮ್ಮ ಒಡವೆ ಕೊಡಲು ನಿರಾಕರಿಸಿದಾಗ ಅವಳ ಮೇಲೆ ಆಕ್ರಮಣ ನಡೆಯುತ್ತದೆ. ಆಗ ಅಲಮೇಲಮ್ಮನು

**ಮಾನಿಂಗಿ ಮಡುವಾಗಿ**

**ತಲಕಾಡು ಮರಳಾಗಿ**

**ಮೈಸೂರು ದೊರೆಗೆ ಮಕ್ಕಳಾಗದೆ ಹೋಗಲಿ**

ಎಂದು ಶಾಪ ಹಾಕಿ ಮಡುವಿಗೆ ಹಾರಿ ಆತ್ಮಾರ್ಪಣೆ ಮಾಡಿಕೊಂಡ ಪ್ರಸಂಗವೇ ನಾಟಕದ ವಸ್ತು.



ಶ್ರೀಮತಿ ಕೃ.ನ.ಪಾರ್ವತಿ ಅವರು 'ನಮ್ಮ ಅಜ್ಜಿ ಕಾಶೀಯಾತ್ರೆ' ಎಂಬ ನಾಟಕವನ್ನು 'ಗೃಹಲಕ್ಷ್ಮಿ' ಎಂಬ ರೇಡಿಯೋ ನಾಟಕವನ್ನು ಬರೆದಿದ್ದಾರೆ.

ಮಟ್ಟನವಿಲೆ ಚಿತ್ರಸೇಣ ಅವರು "ಮಹಾಬಲ ರಾವಣ' ಎಂಬ ನಾಟಕವನ್ನು ಬರೆದಿದ್ದಾರೆ. ಅದರಲ್ಲಿ ರಾವಣನ ವ್ಯಕ್ತಿತ್ವವನ್ನು ಉದಾತ್ತವಾಗಿ ಚಿತ್ರಿಸಿರುವುದು ಈ ನಾಟಕದ ವೈಶಿಷ್ಟ್ಯ. ಇವರ ಇನ್ನೊಂದು ನಾಟಕ 'ಕೌಶಿಕ' ವಿಶ್ವಾಮಿತ್ರನನ್ನು ಕುರಿತ ನಾಟಕ, ಬೆಳಗುಲಿ ಕೆಂಪಯ, "ಅವನತಿ'ಸಿರಿ ಬಂದ ಕಾಲಕೆ' ಎಂಬ ಸಾಮಾಜಿಕ ನಾಟಕಗಳನ್ನು ಬರೆದಿದ್ದಾರೆ. ಚ.ರಾ.ಪಟ್ಟಣದಲ್ಲಿ ಹೆಸರಿಸಬಹುದಾದ ಇನ್ನೊಂದು ಹೆಸರು ನಿಂಬೆಹಳ್ಳಿ ಚಂದ್ರಶೇಖರ್ 'ತಿರುಮಂತ್ರ' ಎಂಬ ನಾಟಕ ಬರೆದಿದ್ದಾರೆ. ಬೇಲೂರಿನ ಚಂದ್ರಶೇಖರ್ ಆಚಾರ್ ಸಿ.ಎಸ್. ಅವರು 'ಚಕ್ರ' ಮತ್ತಿತರ ಮೂರು ನಾಟಕಗಳನ್ನು ಬರೆದಿದ್ದಾರೆ. ಹೊಳೆನರಸೀಪುರದ ನಟೇಶಬಾಬು 'ಒಂದು ಹೆಣದ ಕತೆ' ಎಂಬ ನಾಟಕ ಬರೆದಿದ್ದಾರೆ. ಅರೆಹಳ್ಳಿ ನಾಗಪ್ಪನವರು 'ಕುಡುಕನ ಮಗ' ಎಂಬ ನಾಟಕ ರಚಿಸಿದ್ದಾರೆ.

ದಿ. ಡಾ.ಕೆ.ಸುಬ್ಬಣ್ಣನವರು ಒಂದು ಕಾಲಕ್ಕೆ ಸಕ್ರಿಯರಾಗಿದ್ದರು. ಕುಟುಂಬ ಯೋಜನೆಯ ಧ್ಯೆಯವನ್ನುಳ್ಳ ಅವರ 'ಚೆನ್ನಮ್ಮನ ಸಂಸಾರ' ಎಂಬ ಕಿರುನಾಟಕ ನೂರಾರು ಪ್ರಯೋಗಗಳನ್ನು ಕಂಡಿತು. ಸಾಹಿತಿ ಸತ್ಯನಾರಾಯಣರಾವ್ ಅಣತಿ "ಚಾರ್ವಾಕ' ಎಂಬ ನಾಟಕ ರಚಿಸಿದ್ದಾರೆ. ವೃತ್ತಿಯಲ್ಲಿ ಇಂಜಿನಿಯರ್ ಆದ ಗೊರೂರು ಸೋಮಶೇಖರ್ 'ತಿರುಗುಬಾಣ' ಎಂಬ ನಾಟಕ ಬರೆದಿದ್ದಾರೆ.

ಅರಸೀಕೆರೆ ತಾಲ್ಲೂಕಿನ ಆಲನಹಳ್ಳಿಯ ಗ್ಯಾರಂಟಿ ರಾಮಣ್ಣನವರು ಪಿಡುಗು, ಉಳ್ಳವರು, ತಿಗಣೆಗಳು ಇತ್ಯಾದಿ ನಾಟಕ ಬರೆದಿದ್ದಾರೆ. ಹೊಳೆನರಸೀಪುರದ ಎನ್.ರಾಮರಾವ್ ಅವರು 'ಪಶ್ಚಾತ್ತಾಪ', 'ಮೀಸೆ ಬೃಹನ್ನಳೆ', 'ಸರಿಯಾದ ತೀರ್ಪು', 'ಆತ್ಮಶಾಂತಿ', 'ಮಾಡಿದ್ದುಣ್ಣೆ ಮಹರಾಯ' ನಾಟಕ ಬರೆದಿದ್ದಾರೆ. ಹಾಡ್ಲಹಳ್ಳಿ ನಾಗರಾಜು ಅವರು 'ನಕ' ಎಂಬ ನಾಟಕ ಬರೆದು ಪ್ರದರ್ಶಿಸಿದ್ದಾರೆ. ಸಿ.ಎಂ.ಮುನಿರಾಜು 'ಇಂದ್ರಪ್ರಸ್ತ', 'ನಿಗೂಢರು', 'ಎಸ್.ಮಿನಿಸ್ಟರ್' ನಾಟಕಗಳನ್ನು ಬರೆದಿದ್ದಾರೆ. ಎಂ.ಎಸ್.ಉಮಾಪ್ರಸಾದ್ "ನಮ್ಮ ಎಲುಬುಗಳ ಮೇಲೆ', 'ಅನಾಮಿಕರು', 'ಇಂಡಿಯಾ ೧೯೯೧', 'ಸೂರ್ಯ ಮಂದಾರ' ಎಂಬ ನಾಟಕಗಳನ್ನು ಬರೆದಿದ್ದಾರೆ. ತಾಲ್ಲೂಕು ದಲಿತ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಗೋವಿಂದರಾಜು ದಿಂಡಗೂರು ರಂಗ ಕಲಾವಿದರಲ್ಲದೆ, ಸ್ವರಚಿತ ಬೀದಿ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

# ಹಾಸನ ಜಿಲ್ಲೆಯ ಹವ್ಯಾಸಿ ಕಲಾ ತಂಡಗಳ ಮಾಹಿತಿ

ಜಿಲ್ಲೆಯಾದ್ಯಂತ ಅನೇಕ ಹವ್ಯಾಸಿ ಕಲಾತಂಡಗಳು ಸಕ್ರಿಯವಾಗಿವೆ. ಸಕ್ರಿಯವಾಗಿದ್ದ ಕೆಲವು ಕಲಾತಂಡಗಳು ಕಣ್ಮರೆಯಾಗಿವೆ.

೧೯೮೬ರಲ್ಲಿ ಹಾಸನ ನಗರದಲ್ಲಿ **'ಸಂವೇದನಾ'** ಎಂಬ ರಂಗ ತಂಡ ಹುಟ್ಟಿಕೊಂಡಿತು. ಆ ತಂಡಕ್ಕಾಗಿ ಮೊದಲ ರಂಗ ತರಬೇತಿ ಶಿಬಿರ ನಡೆಯಿತು. ಅದೇ ಆಗ ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಿಂದ ಪದವೀಧರರಾಗಿ ಬಂದಿದ್ದ ಶ್ರೀ ಅಶೋಕ ಬಾದರದಿನ್ನಿ ಆ ಶಿಬಿರದ ನಿರ್ದೇಶಕರು. ಆ ಶಿಬಿರದಲ್ಲಿ ಶೂದ್ರಕನ 'ಮೃಚ್ಛಕಟಿಕ' ಎಂಬ ನಾಟಕವನ್ನು ಸಿದ್ಧಪಡಿಸಿ ಪ್ರದರ್ಶಿಸಲಾಯಿತು. ಪ್ರಯೋಗ ಅಂದಿಗೆ ಹಾಸನ ನಗರಕ್ಕೆ ವಿಶಿಷ್ಟವಾದುದಾಗಿದ್ದು ಸಹೃದಯದ ಮೆಚ್ಚುಗೆ ಪಡೆಯಿತು. ಆದರೆ ಈ ಉತ್ಸಾಹ ಹಾಸನದಲ್ಲಿ ಬಹಳ ಕಾಲ ಉಳಿಯಲಿಲ್ಲ. ಕೇವಲ ಒಂದೆರಡು ಪ್ರಯೋಗಗಳನ್ನು ನೀಡಿ ತಂಡವು ನೇಪಥ್ಯಕ್ಕೆ ಸರಿಯಿತು.

ಜನಪದ ರಂಗ ಮಾಧ್ಯಮ ಇದೇ ಕಾಲಘಟ್ಟದಲ್ಲಿ ಕಾಣಿಸಿಕೊಂಡು ನಿರಂತರವಾಗಿ ಹಾಸನ ಜಿಲ್ಲೆಯಲ್ಲಿ ರಂಗ ಚಟುವಟಿಕೆಯಲ್ಲಿ ತನ್ನನ್ನು ಸಕ್ರಿಯವಾಗಿ ಸಾಗುತ್ತಾ ಬಂದಿದೆ. ೧೯೯೦ರಲ್ಲಿ ಅದೇ ಆಗ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ ಎನ್.ಎಸ್.ಡಿ. ಪದವೀಧರರಾಗಿ ಬಂದಿದ್ದ ಸಿ.ಬಸವಲಿಂಗಯ್ಯ ಅವರು ಜನಪದ ರಂಗಮಾಧ್ಯಮಕ್ಕಾಗಿ 'ರಂಗ ತರಬೇತಿ ಶಿಬಿರ' ನಡೆಸಿ ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿದರು. ಅದೇ ಶಿಬಿರವನ್ನು ೧೯೯೯ರಲ್ಲಿ ಮುಂದುವರೆಸಿದ ಬಸವಲಿಂಗಯ್ಯ ಈ ಶಿಬಿರಕ್ಕೆ ಡಾ.ಚಂದ್ರು ಕಾಳೇನಹಳ್ಳಿ ಅವರ 'ಮಾಯಾ ಕಿನ್ನರಿ' ನಾಟಕವನ್ನು ನಿರ್ದೇಶಿಸಿದರು. ಈ ನಾಟಕ ಕರ್ನಾಟಕದಲ್ಲಿ ಹಾಗೂ ಮುಂಬೈನಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಪಡೆಯಿತು.

ಹಾಸನ ನಗರದಲ್ಲಿ ಆನಂತರದಲ್ಲಿ ಸಕ್ರಿಯಗೊಂಡ ದಿ.ಸಣ್ಣೇಗೌಡರ ನೇತೃತ್ವದ 'ಅನಿಕೇತನ ತಂಡ' ಅನೇಕ ನಾಟಕಗಳನ್ನು ಪ್ರತಿವರ್ಷವೂ ರಂಗ ಚಟುವಟಿಕೆಗಳಲ್ಲಿ ತೊಡಗಿತು. ದಿ.ಸಣೇಗೌಡರೇ ಈ ತಂಡದ ಎಲ್ಲಾ ನಾಟಕಗಳ ನಿರ್ದೆಶಕರಾಗಿ, ನೇತಾರರಾಗಿ ಕಡೆಯವರೆಗೆ ಈ ತಂಡದಲ್ಲಿ ಸಕ್ರಿಯರಾಗಿದ್ದುಕೊಂಡು ಅನೇಕ ಯಶಸ್ವಿ

ಪ್ರಯೋಗಗಳನ್ನು ನೀಡಿದರು. ಸ್ವತಃ ನಟರೂ ಆಗಿದ್ದ ಅವರ ಸಂಘಟನಾ ಚಾತುರ್ಯ, ಪಾರದರ್ಶಕತೆ ಬಹಳ ಕಾಲ ಆ ತಂಡವನ್ನು ಸಕ್ರಿಯವಾಗುವಂತೆ ಮಾಡಿತು.

ಈ ಸಂದರ್ಭದಲ್ಲಿ ಅವರು ಸಂಗ್ಯಾಬಾಳ್ಯ, ಗಾಂಧಿ ವಿರುದ್ಧ ಗಾಂಧಿ, ಜಲಗಾರ, ಕಿರಗೂರಿನ ಗಯ್ಯಾಳಿಗಳು, ಸಂಕ್ರಾಂತಿ, ಕೊಡೆಗಳು, ಮಾಯಾಲೋಕ ಮುಂತಾದ ಹದಿನಾಲ್ಕಕ್ಕೂ ಹೆಚ್ಚಿನ ನಾಟಕಗಳನ್ನು ರಂಗದ ಮೇಲೆ ತಂದರು. ನಾಟಕಕ್ಕಾಗಿ ಹೆಚ್ಚು ಹಣ ಖರ್ಚು ಮಾಡದೆ ಇರುವ ಕಡಿಮೆ ಹಣದಲ್ಲಿ ನೋಡುವ ಪ್ರೇಕ್ಷಕರಿಗೆ ಟಿಕೆಟ್ಟಿನ ಹೆಚ್ಚಿನ ಹೊರೆಯಾಗದಂತೆ ನಾಟಕಗಳನ್ನು ಪ್ರಯೋಗಿಸಿದ ಕೀರ್ತಿ ಸಣೇಗೌಡರದು. ಅವರ ಅಕಾಲಿಕ ಮರಣದಿಂದಾಗಿ ಹಾಸನ ಜಿಲ್ಲಾ ರಂಗಭೂಮಿ ಕೊಂಚ ಮಸುಕಾಯಿತು. ಗೌಡರ ಪ್ರೇರಣೆಯಿಂದ ರೂಪುಗೊಂಡ ಕಲಾವಿದರ ದಂಡೇ ಇಂದಿಗೂ ಹಾಸನದಲ್ಲಿ ರಂಗಭೂಮಿಯಲ್ಲಿ ಸಕ್ರಿಯವಾಗಿದೆ.

ರಂಗ ತುಡಿತವಿರುವ ಸಮಾನ ಮನಸ್ಕರು ಕಟ್ಟಿಕೊಂಡ ಸಂಸ್ಥೆಯೇ ಹಾಸನದ “ರಂಗಸಿರಿ'. ೧೯೯೦ರ 'ಭಾರತ ಜ್ಞಾನ ವಿಜ್ಞಾನ' ಜಾಥಾ ನಂತರ ನಡೆದ ನಡೆದ ಸಾಕ್ಷರತಾ ಆಂದೋಲನದಲ್ಲಿ ತೊಡಗಿಸಿಕೊಂಡು ಬೀದಿ ನಾಟಕಗಳ ಮೂಲಕ ಜಿಲ್ಲೆಯಲ್ಲಿ ಸಂಚರಿಸಿತು.

ರಂಗಸಿರಿಯ ವಿದೂಷಕ, ಮಾನಿಷಾದ, ಮನೆ ನಾಟಕಗಳು ಸರ್ಕಾರಿ ನೌಕರರ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿವೆ. ಸಂಗ್ಯಾಬಾಳ್ಯಾ, ರಥಮುಸಲ, ಉಚಲ್ಯಾ ನಾಟಕಗಳು ಹಲವು ನಾಟಕ ಸ್ಪರ್ಧೆಯಲ್ಲಿ ಬಹುಮಾನಗಳಿಸಿವೆ.

ಕೇಳು ಜನಮೇಜಯ, ಬದುಕ ಮನ್ನಿಸು ಪ್ರಭುವೆ, ಜಾತ್ರೆ, ಗಂಧವತಿ ಹದ್ದುಮೀರಿದ ಹಾದಿ, ಅಂತಿಗೊನೆ ಮುಂತಾದ ನಾಟಕಗಳನ್ನು ಯಶಸ್ವಿಯಾಗಿ ರಂಗದ ಮೇಲೆ ತಂದಿದೆ. ಹೊರಗಿನ ನಾಟಕ ತಂಡಗಳನ್ನು ಕರೆಯಿಸಿ ರಂಗಾಸಕ್ತರಿಗಾಗಿ ಸದಭಿರುಚಿ ನಾಟಕಗಳನ್ನು ಏರ್ಪಡಿಸಿದೆ.

ಮಕ್ಕಳಿಗಾಗಿ ೨೦೦೬ರಲ್ಲಿ 'ಚಿಣ್ಣರ ಮೇಳ' ಆಯೋಜಿಸಿ ಹಾಸನದ ಮಕ್ಕಳಲ್ಲಿ ರಂಗಾಸಕ್ತಿ ಮೂಡಿಸುವ ಪ್ರಯತ್ನ ಮಾಡಿದೆ. ಅಲ್ಲಿ ಮಕ್ಕಳಿಗಾಗಿ ಚಪ್ಪಲಿ ರಾಜ್ಯ, ಕೆರೆಗೆ ಹಾರ, ಕಿಂದರಿಜೋಗಿ, ರಾಜಹಕ್ಕಿ, ತಮ್ಮಣ್ಣನ ತಮಟೆ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ಮಕ್ಕಳಲ್ಲಿ ರಂಗಾಸಕ್ತಿ ಮೂಡಿಸಿದೆ. ರಂಗಸಿರಿಯನ್ನು ಸಕ್ರಿಯಗೊಳಿಸುವಲ್ಲಿ ಕೆ.ರಂಗಸ್ವಾಮಿ, ಪತ್ರಕರ್ತ ಶಿವಾನಂದ ತಗಡೂರು, ಶಾಡ್ರಾಕ್ ಮುಂತಾದವರು ಸಕ್ರಿಯರಾಗಿದ್ದಾರೆ.

“ಕಲಾಸಿರಿ' ಎಂಬ ನಾಟಕ ತಂಡ ಕಟ್ಟಿಕೊಂಡು ಸಕ್ರಿಯರಾಗಿರುವ ಜಯಶಂಕರ ಬೆಳಗುಂಬ ಅವರು ತಮ್ಮ ತಂಡಕ್ಕೆ ಸ್ಮಶಾನ ಕುರುಕ್ಷೇತ್ರ ನಾಟಕ ನಿರ್ದೇಶನ ಮಾಡಿದ್ದಾರೆ.



ಆನಂತರದಲ್ಲಿ ತಮ್ಮ ತಂಡದ ಕಲಾವಿದರ ಮೂಲಕ 'ನಮ್ಮ ನಿಮ್ಮೊಳಗೊಬ್ಬ' 'ಗಾಂಧಿ ವಿರುದ್ಧ ಗಾಂಧಿ' 'ಒಂದು ಬೊಗಸೆನೀರು' ಮುಂತಾದ ನಾಟಕಗಳನ್ನು ತಮ್ಮ ತಂಡಕ್ಕೆ ನಿರ್ದೇಶನ ಮಾಡಿ ಕರ್ನಾಟಕದ ವಿವಿಧೆಡೆ ಪ್ರದರ್ಶಿಸಿದ್ದಾರೆ.

ಕನ್ನಡ ಸಂಸ್ಕೃತಿ ಇಲಾಖೆಯ ನೌಕರರಾಗಿರುವ ಕುಮಾರ್ ಸ್ವತಃ ನಟ ಹಾಗೂ ನಿರ್ದೇಶಕ. ಅವರು ತಮ್ಮ 'ಸಂಸ' ಕಲಾತಂಡದ ಮೂಲಕ ಜಲಗಾರ, ಹಯವದನ, ಮಹಾಪರಿವರ್ತನೆ, ಮುತ್ತಿನ ಮೂಗುತಿ, ನಕ್ಕಳಾ ರಾಜಕುಮಾರಿ, ಆಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು ಮುಂತಾದ ನಾಟಕ ಮಾಡಿದ್ದಾರೆ. - ನಿಕೊಲಸ್ ತಮ್ಮದೇ ತಂಡ ಕಟ್ಟಿಕೊಂಡು 'ಜೋಕುಮಾರಸ್ವಾಮಿ' ನಾಟಕದ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. **ಸಕಲೇಶಪುರ**

ರಂಗಭೂಮಿಯಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿರುವ ಸಕಲೇಶಪುರದಲ್ಲಿ ನಿರಂತರವಾಗಿ ರಂಗಚಟುವಟಿಕೆಗಳು ನಡೆಯುತ್ತಿವೆ.. ಸಾರಂಗ ಅವರು ವಿಶ್ವಕಲಾನಿಕೇತನ ಎಂಬ ಸಂಸ್ಥೆ ಸ್ಥಾಪಿಸಿದ್ದರು. ಈ ಸಂಸ್ಥೆಯು 'ಉದ್ಧಾರ' 'ಕರ್ಮಯೋಗಿ' 'ಹರಿದ್ರಾಕುಂಕುಮ' 'ನಿರಾಸೆ' 'ಸುವರ್ಣವೃಷ್ಟಿ' 'ಹೊಸವ್ಯಾಪಾರ' 'ಟಿಪ್ಪುಸುಲ್ತಾನ್” ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಅನೇಕ ಬಹುಮಾನಗಳನ್ನು ಸ್ಪರ್ಧೆಯಲ್ಲಿ ಈ ತಂಡ ಗಳಿಸಿತು. ಸಕಲೇಶಪುರದ ಜಾತ್ರೆಯ ಸಂದರ್ಭದಲ್ಲಿ 'ಅಖಿಲ ಕರ್ನಾಟಕ ನಾಟಕ ಸ್ಪರ್ಧೆ'ಯಲ್ಲಿ ರಾಜ್ಯದ ಅನೇಕ ಕಡೆಗಳಿಂದ ಹವ್ಯಾಸಿ ತಂಡಗಳು ಬಂದು ಇಲ್ಲಿ ಪ್ರದರ್ಶನ ನೀಡಿವೆ. ಹಲವು ಕಾರಣದಿಂದ ವಿಶ್ವಕಲಾನಿಕೇತನ ಸಂಸ್ಥೆಯು “ಮಲ್ನಾಡ್ ಕಲಾಸಂಘ'ವೆಂಬ ಹೆಸರಿನಿಂದ ಮರುಹುಟ್ಟು ಪಡೆಯಿತು. ಈ ಸಂಘವು “ಎಚ್ಚಮ ನಾಯಕ' ನಾಟಕವನ್ನು ರಾಜ್ಯದ ಹಲವೆಡೆ 40ಕ್ಕೂ ಹೆಚ್ಚು ಪ್ರದರ್ಶನ ನೀಡಿತು. ಅನೇಕ ಯಶಸ್ವಿ ಪ್ರಯೋಗಗಳನ್ನು ನೀಡಿದ ಮಲ್ನಾಡ್ ಕಲಾಸಂಘ ಈಗ ರಂಗಚಟುವಟಿಕೆ ನಡೆಸುತ್ತಿಲ್ಲ. ಈ ಸಂಘವನ್ನು ಮುನ್ನಡೆಸಿದ ಸಾರಂಗ ಈಗ ಇಲ್ಲ. ಅದರಲ್ಲಿ ಸಕ್ರಿಯರಾಗಿದ್ದ ಹೆಚ್.ಬಿ.ವಸಂತ ಕುಮಾರ್ ರಾಜಶೇಖರಯ್ಯ, ಸ.ಚ.ಜಯಗೋಪಾಲ್, ಮಳಲಿ ರಾಮಪ್ಪ ಇವರೀಗ ಸಕಲೇಶಪುರದಲ್ಲಿಯೇ ನೆಲೆಸಿದ್ದಾರೆ.

ಇದಲ್ಲದೆ ಸಿದ್ಧಿವಿನಾಯಕ ಕಲಾಸಂಘ, ಶಾಂತಲಾ ಕಲಾಸಂಘ, ರೈಲ್ವೆಕಲಾಸಂಘ, ಶಾರದಾ ಕಲಾಸಂಘಗಳು ನಾಟಕ ಪ್ರದರ್ಶನ ನೀಡಿವೆ. ಸಿದ್ಧಿವಿನಾಯಕ ಕಲಾಸಂಘವು ಪ್ರದರ್ಶಿಸಿದ 'ಮಗನ ತಿಂದ

ಮಹರಾಯನ ದುರ್ಗ' ಎಂಬ ನಾಟಕ ಮುಖ್ಯವಾದುದು. ಇದಕ್ಕೆ ಸಂಬಂಧಿಸಿದ ಸ್ಥಳೀಯ ಐತಿಹ್ಯ ಆಲುರು ತಾಲೂಕಿನಲ್ಲಿರುವ ಒಂದು



ಐತಿಹಾಸಿಕ ಕೋಟೆಗೆ ಸಂಬಂಧಿಸಿದುದು. ಈತ ಕೃಷ್ಣದೇವರಾಯನ ಸಾಮಂತನೆಂಬ ಪ್ರತೀತಿ ಇದೆ. ಈತನ ನಂತರ ಈ ಪ್ರದೇಶವನ್ನು ಕೃಷ್ಣದೇವರಾಯ ಐಗೂರು ಅರಸನ ವಶಕ್ಕೆ ಕೊಟ್ಟನೆಂಬ ಪ್ರತೀತಿ ಇದೆ. ಬಹುಶಃ ಈ ಸಾಮಂತ ಜನಸಂಪರ್ಕದಿಂದ ದೂರ ಇದ್ದ ಕಾರಣದಿಂದ ಈ ಬಗೆಯ ಐತಿಹ್ಯ ರೂಪುಗೊಳ್ಳಲು ಕಾರಣವಾಗಿರಬಹುದು.

ಆನಂತರ ಹೆಚ್.ಬಿ.ಯಜಮಾನ್ ಅವರ ನೇತೃತ್ವದಲ್ಲಿ ಜನ್ಮತಾಳಿದ 'ನಟರಾಜ ಕಲಾನಿಕೇತನ' ಕಲಾತಂಡವು ದಿವ್ಯದರ್ಶನ ಸುವರ್ಣವೃಷ್ಟಿ ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ಸಾಮಾಜಿಕ ನಾಟಕಗಳಿಗಾಗಿಯೇ ಹುಟ್ಟಿಕೊಂಡ ಮಟ್ಟ ಬಳಗ ಕೆಲನಾಟಕ ಪ್ರದರ್ಶಿಸಿತು. ಸರ್ಕಾರಿ ನೌಕರರಾಗಿದ್ದ ರಾಜಶೇಖರ, ಎನ್.ಎಲ್.ಚನ್ನೇಗೌಡ ಮುಂತಾದವರು ರಂಗಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು.

ಮೇಲಿನ ಎಲ್ಲ ರಂಗತಂಡಗಳು ನೇಪಥ್ಯಕ್ಕೆ ಸರಿದ ಸಂದರ್ಭದಲ್ಲಿ 1978ರಲ್ಲಿ ರಕ್ಷದಿಯ 'ಕಾರ್ಮಿಕ ಮಿತ್ರ ಸಂಘ' ಹುಟ್ಟಿಕೊಂಡು ಫ್ರೆಂಡ್ಸ್ ಕ್ಲಬ್ ಜೊತೆಗೆ 'ನಮ್ಮ ಎಲುಬುಗಳ ಮೇಲೆ' ಮತ್ತು 'ಚುವನ್ನ ಮೇಘಂ' ಎಂಬ ಮಳೆಯಾಳಿ ನಾಟಕ ಪ್ರದರ್ಶಿಸಿದವು.

ಈ ಕಾರ್ಮಿಕ ಮಿತ್ರ ಸಂಘವೇ ಈಗ ಜೈ ಕರ್ನಾಟಕ ಸಂಘ ಬೆಳೇಕೆರೆ ಆಗಿ ಪರಿವರ್ತನೆಗೊಂಡಿದೆ. ಈ ಸಮಯದಲ್ಲಿಯೇ ಎಸ್.ಎಸ್.ರವಿಶಂಕರ್ 'ಶೃತಿ' ಎಂಬ ರಂಗತಂಡ ಕಟ್ಟಿ “ಕರುಳೊಳಗಿನ ಕೆಂಡ', 'ಬೆಳ್ಳಿ', 'ಉದ್ಭವ' ಮುಂತಾದ ನಾಟಕ ಪ್ರದರ್ಶಿಸಿದರು. ಆನಂತರ ಬಂದ ಸಂಚಯ ಕಲಾಬಳಗ ಬಿ.ಜಿ.ಪ್ರತಾಪ್‌ಕುಮಾರ್ ನೇತೃತ್ವದಲ್ಲಿ ರೂಪುಗೊಂಡು ಕುರಿತೇರು, ರೊಟ್ಟಿಯಣ, ಅನಾರ್ಕಲಿ, ಈಡಿಪಸ್ ಮುಂತಾದ ನಾಟಕ ಪ್ರದರ್ಶಿಸಿತು.

1985 ರಿಂದ ಜೈಕರ್ನಾಟಕ ಸಂಘವು ಅನೇಕ ನಾಟಕ ತಂಡಗಳನ್ನು ಬೆಳ್ಳೇಕೆರೆಗೆ ಕರೆಸಿ ಪ್ರದರ್ಶನಕ್ಕೆ ಅವಕಾಶ ನೀಡಿ ಅಲ್ಲಿನ ಜನರಿಗೆ ಸದಭಿರುಚಿಯ ನಾಟಕ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿತು. ಹೆಗೋಡು ನಿನಾಸಂ, ಸೃಷ್ಟಿಕೊಡವರಂಗ, ರಂಗಭೂಮಿ, ರಂಗಸಿರಿ ತಂಡಗಳು ಇಲ್ಲಿ ಬಂದು ನಾಟಕ ಪ್ರದರ್ಶಿಸಿವೆ. 1988ರಲ್ಲಿ ಪ್ರಥಮ ನಾಟಕ ತರಬೇತಿ ಶಿಬಿರವು ನಿರ್ದೇಶಕ ಮಂಡ್ಯ ರಮೇಶ್ ಮತ್ತು

ಕೃಷ್ಣಕುಮಾರ್ ನಾರ್ಣಕಜೆ ಅವರ ನೇತೃತ್ವದಲ್ಲಿ ನಡೆಯಿತು. ಶಿಬಿರದಲ್ಲಿ ಬಂಕಾಪುರದ ಬಯಲಾಟ ನಾಟಕ ಸಿದ್ಧಪಡಿಸಿ ಪ್ರದರ್ಶಿಸಲಾಯಿತು.

ಈ ನಡುವೆ ಸಕಲೇಶಪುರದಲ್ಲಿ ಆರಂಭವಾದ 'ಭರತ ಮುನೇಶ್ವರ ನಾಟ್ಯಸಂಘ'ವು ರಂಗತರಬೇತಿ ಶಿಬಿರ ನಡೆಸಿತು. ಬೇಂದ್ರೆಯವರ ಸಾಯೋ ಆಟ, ಡುಂಡಿರಾಜರ ಓಡುವವರು, ಧ್ರುವರಾಜ ದೇಶಪಾಂಡೆಯವರ ನಕ್ಕಳಾ ರಾಜಕಮಾರಿ ನಾಟಕಗಳು



ರಂಗಕ್ಕೆ ಬಂದವು. 1990ರಲ್ಲಿ ಬನವಾಸ ರಾಜಶೇಖರ ಮತ್ತು ಶೈಲೇಶ್‌ಕುಮಾರ್ “ಮಾನವ ಕಲಾನಿಕೇತನ' ಕಟ್ಟಿ ಒಥೆಲೋ ನಾಟಕ ಪ್ರದರ್ಶಿಸಿದರು.

ಮುಂದಿನ ದಿನಗಳಲ್ಲಿ ಬೆಳ್ಳೇಕೆರೆಯೇ ರಂಗಚಟುವಟಿಕೆಗಳ ಕೇಂದ್ರವಾಯಿತು. ಈ ಜೈಕರ್ನಾಟಕ ಮಿತ್ರ ಸಂಘವು ರಂಗಚಟುವಟಿಕೆಗಳ ಜೊತೆಗೆ ಸಾಮಾಜಿಕ ಸೇವಾಕಾರ್ಯ ಆರಂಭಿಸಿತು. ರೈತ ಚಳುವಳಿ, ದಲಿತ ಚಳುವಳಿ, ಸಾಕ್ಷರತಾ ಆಂದೋಲನ, ಪರಿಸರ ಸಂರಕ್ಷಣೆ ಮುಂತಾದ ವಿಷಯಗಳಲ್ಲಿ ತನ್ನನ್ನು ತೊಡಗಿಸಿಕೊಂಡದ್ದು ಒಂದು ವಿಶೇಷ. ಆನಂತರದಲ್ಲಿ ನಿರಂತರವಾಗಿ ರಂಗತರಬೇತಿ ಶಿಬಿರ, ಮಕ್ಕಳ ರಂಗಶಿಬಿರ, ನಾಟಕೋತ್ಸವ ನಿರಂತರವಾಗಿ ನಡೆಯುತ್ತಾ ಬರುತ್ತಿವೆ.

ಈ ಸಂಸ್ಥೆಯ ನಮ್ಮ ಎಲುಬುಗಳ ಮೇಲೆ, ಬಂಕಾಪುರದ ಬಯಲಾಟ, ಮಾಯಾಮೃಗ, ಅರಹಂತ, ಧನ್ವಂತರಿ ಚಿಕಿತ್ಸೆ, ಚಂದ್ರಮಂಡಲ ಮುಂತಾದ ನಾಟಕಗಳು ಹಾಗೂ ಹುಣ್ಣಿಮೆ ಬಂತು, ಅಜ್ಜ ಬಂದ, ನೀಲಿ ಕುದುರೆ ಸಿಂಗಿ ನಿಂಗಿ ಸಂಸಾರ, ನಾಣಿಭಟ್ಟನ ಸ್ವರ್ಗದ ಕನಸು ಮುಂತಾದ ಮಕ್ಕಳ ನಾಟಕಗಳು ಮುಖ್ಯವಾದವು.

ಈ ತಂಡಕ್ಕಾಗಿ ಇದುವರೆಗೆ ಪ್ರಸಾದ್ ರಕ್ಷಿದಿ, ಮಂಡ್ಯ ರಮೇಶ್, ಕೃಷ್ಣಕುಮಾರ್ ನಾರ್ಣಕಜೆ, ಧ್ರುವರಾಜ್ ದೇಶಪಾಂಡೆ, ಹುಲಿಗಪ್ಪ ಕಟ್ಟಿಮನಿ, ವಿನೋದ್ ಅಂಬೇಕರ ಮುಂತಾದ ಪ್ರಸಿದ್ಧ ರಂಗ ನಿರ್ದೇಶಕರು ನಾಟಕ ನಿರ್ದೇಶಿಸಿದ್ದಾರೆ. ಮೂರ್ತಿ ದೇರಾಜೆ, ನಂದೀಶ, ಎಸ್.ರತ್ನ, ಅಮೃತ ರಕ್ಷಿದಿ ಮುಂತಾದವರು ಮಕ್ಕಳ ನಾಟಕ ನಿರ್ದೇಶಿಸಿದ್ದಾರೆ.

ಜೈಕರ್ನಾಟಕ ಸಂಘವು ಹಾಸನ, ಶ್ರವಣಬೆಳ್ಗೊಳ, ಚನ್ನರಾಯಪಟ್ಟಣ, ಮೈಸೂರು, ಬೆಂಗಳೂರು, ಸುಳ್ಯ, ಚೊಕ್ಕಾಡಿ, ಸುಬ್ರಹ್ಮಣ್ಯ ಮೂಡಿಗೆರೆ, ಹೂವಿನ ಹಡಗಲಿ ಮುಂತಾದ ಕಡೆ ನಾಟಕ ಪ್ರದರ್ಶಿಸಿವೆ. ಈವರೆಗೆ ಜೈಕರ್ನಾಟಕ ಸಂಘದಲ್ಲಿ ಸುಮಾರು ಇನ್ನೂರೈವತ್ತಕ್ಕೂ ಹೆಚ್ಚು ಜನ ಕಲಾವಿದರು,

ರಂಗತಂತ್ರಜ್ಞರು, ಬೆಳಕಿನ ವಿನ್ಯಾಸಕರು, ಪರಿಕರ ವಿನ್ಯಾಸಕರು, ಸೆಟ್ ವಿನ್ಯಾಸಕರಾಗಿ ದುಡಿದಿದ್ದಾರೆ. ಬೆಳ್ಳಕೆರೆಯಲ್ಲಿ 'ಪೂರ್ಣ ಚಂದ್ರ ತೇಜಸ್ವಿ ಸುಸಜ್ಜಿತ ರಂಗಮಂದಿರವು ಸುಂದರ ಪರಿಸರದಲ್ಲಿ ಮೈದಾಳಿದೆ. ಎಸ್.ಕೆ.ಕರೀಂಖಾನ್ ನೆನಪಿನ ಗ್ರಂಥಾಲಯ, ವಸತಿಗೃಹ, ವಾಚನಾಲಯ ಒಳಗೊಂಡು ಒಂದು ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ.

**ಹೊಳೆನರಸೀಪುರ**

ಹೊಳೆನರಸೀಪುರವು ಹೇಮಾವತಿ ನದೀ ತೀರದಲ್ಲಿರುವ ಒಂದು ಪಟ್ಟಣ. ಐತಿಹಾಸಿಕವಾಗಿ ಈ ಊರಿಗೆ ಮಹತ್ವವಿದೆ. ಶ್ರೀಮತಿ ಜಯಮ್ಮನವರು ಬಾಗಿವಾಳಿನಲ್ಲಿ



ಜನಿಸಿ ಚಿಕ್ಕಂದಿನಲ್ಲಿಯೇ ಸಂಗೀತಾಭ್ಯಾಸ ಮಾಡಿದವರು. ಆನಂತರದಲ್ಲಿ ಕಂಪನಿ ನಾಟಕಗಳ ಜೊತೆ ಗುರುತಿಸಿಕೊಂಡು ಸುಮಾರು ಐದು ದಶಕಗಳ ಕಾಲ ಕರ್ನಾಟಕದಲ್ಲಿ ರಂಗಭೂಮಿ ಕಲಾವಿದೆಯಾಗಿ ಗುರುತಿಸಿ ಕೊಂಡವರು. ಗುಬ್ಬಿ ಕಂಪನಿ, ಮಹದೇವಸ್ವಾಮಿ ಕಂಪನಿಗಳಲ್ಲಿ ಪುರುಷ ಪಾತ್ರಗಳಲ್ಲಿ ಅಭಿನಯಿಸಿ ಪ್ರಖ್ಯಾತರಾದವರು. ಇಳಿವಯಸ್ಸಿನವರೆಗೆ ರಂಗಭೂಮಿಯ ಕೆಲಸ ಮಾಡಿದರು. ಹಲವು ನಾಟಕಗಳನ್ನು ನಿರ್ದೆಶಿಸಿದ ಹಿರಿಮೆ ಶ್ರೀಮತಿ ಜಯಮ್ಮ ಅವರದು. ಸದಾರಮೆ ನಾಟಕದಲ್ಲಿ ಇವರ ಕಳ್ಳನ ಪಾತ್ರ ಜನರ ಮೆಚ್ಚುಗೆಗೆ ಪಾತ್ರವಾಗಿತ್ತು.

ಅಲಂಕಾರ ಸೇತುರಾಮಾಚಾರ್ ಇವರು ತಾಯಿನಾಡು, ಜನವಾಣಿ ಪತ್ರಿಕೆಯ ವರದಿಗಾರರಾಗಿದ್ದುಕೊಂಡು ಆರು ದಶಕಗಳ ಕಾಲ ರಂಗಭೂಮಿಯ ಸೇವೆ ಸಲ್ಲಿಸಿದವರು. ಹಲವು ಪೌರಾಣಿಕ ನಾಟಕಗಳಲ್ಲಿ ಸ್ತ್ರೀಪಾತ್ರ ನಿರ್ವಹಿಸಿ ಪ್ರಶಂಸೆಗೆ ಒಳಗಾದವರು. ಇವರ ಮಂಡೋದರಿ ಸ್ತ್ರೀಪಾತ್ರಕ್ಕೆ 1951ರಲ್ಲಿ ರಾಜ್ಯ ಕಲಾಸಂಘ ಗೌರವ ದೊರಕಿದೆ.

ಅಣ್ಣಿಗನಹಳ್ಳಿ ಅಣ್ಣಯ್ಯನವರು ಒಳ್ಳೆಯ ರಂಗಕಲಾವಿದರು, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ಪುತ್ರ ಸೋಮಣ್ಣ ಕೂಡಾ ರಂಗಕಲಾವಿದರು. ಶನಿದೇವರ ಪಾತ್ರ ಅಭಿನಯಿಸುವುದರ ಜೊತೆಗೆ ಶನಿಮಹಾತ್ಮ ಕಥೆಯನ್ನೂ ಓದುತ್ತಾರೆ.

ಪಾನಿಪುರಿ ದಾಸಪ್ಪ ಹಾಸ್ಯ ಪಾತ್ರಗಳಲ್ಲಿ ಗುರುತಿಸಿಕೊಂಡು ಅಭಿನಯಿಸಿದ್ದಾರೆ. ಅಲ್ಲದೆ ನಿವೃತ್ತ ಶಿಕ್ಷಕ ಬಸವರಾಜು ಅವರ ಎಚ್ಚಮನಾಯಕ, ರಣಧೀರ ಕಂಠೀರವ, ಟಿಪ್ಪೂಸುಲ್ತಾನ್ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಾಜಾವಿಕ್ರಮ ನಾಟಕದಲ್ಲಿ 145 ಬಾರಿ ಅಭಿನಯಿಸಿದ್ದಾರೆ.

ಹೆಚ್.ಎಸ್.ಸೂರ್ಯನಾರಾಯಣರಾವ್ ಹಿರಿಯ ರಂಗಕಲಾವಿದರು. 'ಮುಕ್ತ' ಎಂಬ ಸಾಮಾಜಿಕ ನಾಟಕದಲ್ಲಿ ಮಾರಜ್ಜನೆಂಬ ಮುದುಕನ ಪಾತ್ರಮಾಡಿ ಜನಮನ್ನಣೆ ಗಳಿಸಿದವರು. ಹಾಗೆಯೇ ಗೋವಿಂದರಾಜು ಎಂಬುವವರು ರಂಗಕಲಾ ಸಂಘಟಕರು. ಅನೇಕ ಸ್ಪರ್ಧಾ ನಾಟಕಗಳಲ್ಲಿ ಬಹುಮಾನ ಗಳಿಸಿರುತ್ತಾರೆ.

ಹೊಳೆನರಸೀಪುರದಲ್ಲಿ ಹೆಸರಿಸಬೇಕಾದ ಇನ್ನೊಂದು ಹೆಸರು ಟಿ.ಪರ್ವೈತರಾಜು (ಪಕ್ವತಯ್ಯ) ಅವರು ಇಲ್ಲಿನ ಹಿರೇಬೆಳಗುಲಿಯವರು ರಂಗಭೂಮಿಯ ಉತ್ತಮ ಕಲಾವಿದರು ಹಾಗೂ ನಾಟಕಕಾರರು. ಇವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದರೂ ಕೆಲ ಕಂಪನಿ ನಾಟಕಗಳಲ್ಲಿ ಕಲಾವಿದರಾಗಿ ದುಡಿದಿದ್ದಾರೆ. ಇವರು 'ದೀಪಾವಳಿ' ಮುಂತಾದ ಕಂಪನಿ ನಾಟಕಗಳನ್ನು ಗ್ರಾಮೀಣ ಭಾಗದ ಕಲಾವಿದರಿಗೆ ನಿರ್ದೇಶನ ಮಾಡಿದ್ದಾರೆ. “ಗಂಡಿಗೂ ತಾಳಿ' ಎಂಬ ಹಾಸ್ಯನಾಟಕ ಬರೆದು ನಿರ್ದೇಶಿಸಿದ್ದಾರೆ. ಈ ನಾಟಕಕ್ಕೆ ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಡೆದ ಸ್ಪರ್ಧಾನಾಟಕಗಳಲ್ಲಿ ಅನೇಕ



ನಾಟಕ ಬಹುಮಾನಗಳು ಬಂದಿರುತ್ತವೆ. ಪ್ರಸ್ತುತದಲ್ಲಿ ಇವರು ಮಂಡ್ಯದ ಸಂತೇಬಾಚಹಳ್ಳಿಯ ಪಕ್ಕದ ಹನುಮನಹಳ್ಳಿಯಲ್ಲಿ ನೆಲೆಸಿದ್ದಾರೆ.

ವೀರಬಸಪ್ಪ ಹಾಸ್ಯಕಲಾವಿದರಾಗಿ ಗುರುತಿಸಿಕೊಂಡು ಅನೇಕ ಸಾಮಾಜಿಕ, ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಬಾ.ರಾ.ಸುಬ್ಬರಾಯರು ಹಾಸ್ಯ ಕಲಾವಿದರಾಗಿ ಗುರುತಿಸಿಕೊಂಡವರು. ಹಾಗೆಯೇ ರಾಮಚಂದ್ರ ಪುತ್ತೂರಾಯ ಇವರು ರಂಗಭೂಮಿಯಲ್ಲಿ ಗುರುತಿಸಿಕೊಂಡು ಕೆಲಸ ಮಾಡಿದ್ದಾರೆ. ಬಾ.ರಾ.ಸುಬ್ಬರಾಯರು ತೇಜಸ್ವಿ ಕಲಾಸಂಘವನ್ನು ಕಟ್ಟಿದವರು.

ಜ್ಯೋತಿಕಲಾಸಂಘವನ್ನು ಕಟ್ಟಿ ಬೆಳೆಸಿದ ಕೆ.ಬಿ.ವೆಂಕಟೇಶ್ ಹಿರಿಯ ರಂಗಕಲಾವಿದರು. ರಾಜ್ಯದಾದ್ಯಂತ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾರೆ. ಇವರು ಸಾಮಾಜಿಕ ನಾಟಕಗಳಲ್ಲದೆ ಐತಿಹಾಸಿಕ ನಾಟಕಗಳಾದ ಎಚ್ಚಮ ನಾಯಕ, ನರಸಿಂಹನಾಯಕ, ರಣಧೀರ ಕಂಠೀರವ ಮುಂತಾದ ನಾಟಕಗಳನ್ನು ಅಭಿನಯಿಸಿದ್ದಾರೆ. ಅನೇಕ ನಾಟಕಗಳನ್ನು ತಾವೇ ನಿರ್ದೇಶಿಸಿದ್ದಾರೆ.

ಹೊಳೆನರಸೀಪುರದಿಂದ ಹೆಸರಿಸಲೇಬೇಕಾದ ಇನ್ನೊಂದು ಹೆಸರು ಅಣ್ಣಾಜಪ್ಪ ಗುಂಜೇವು, ಇವರು ಇಲ್ಲಿನ ಪ್ರಮುಖ ನಾಟಕಕಾರರು. ಇವರು ಸುವರ್ಣ, ಅಡ್ಡದಾರಿ, ಅಪಮಾರ್ಗ, ಮುತ್ತಿನಂಥ ಮಗ ಎಂಬ ನಾಟಕಗಳನ್ನು ಬರೆದಿದ್ದಾರೆ. ಇವರು ರಚಿತ ಹಲವು ನಾಟಕಗಳು ಅನೇಕ ಸ್ಪರ್ಧಾ ನಾಟಕಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿವೆ. ಇವರು ಕವಿಗಳೂ ಹೌದು. ಮಕ್ಕಳಿಗಾಗಿ ಅನೇಕ ಕವನ ಸಂಕಲನ ರಚಿಸಿದ್ದಾರೆ. 'ಕನ್ನಡ ತೇರ ಎಳೆಯೋಣ' ಎಂಬ ಶಿಶುಗೀತೆ ರಚಿಸಿದ್ದಾರೆ. ಜಾನಪದದಲ್ಲಿಯೂ ಆಸಕ್ತಿ ಹೊಂದಿ

ಕ್ಷೇತ್ರಕಾರ್ಯ ನಡೆಸಿ ಸಂಶೋಧಿತ ಕೃತಿ ಹೊರತರುವ ಹವಣಿಕೆಯಲ್ಲಿದ್ದಾರೆ. ಇವರನ್ನು ನಾಟಕ ಅಕಾಡೆಮಿ ಹಾಗೂ ಅನೇಕ ಸಂಘಸಂಸ್ಥೆಗಳು ಗೌರವಿಸಿವೆ.

ಗಂಗಾಚರಣ್ ಅವರು ಒಂದು ಕಾಲಕ್ಕೆ ಪ್ರಸಿದ್ಧ ಸಂಗೀತ ನಿರ್ದೇಶಕ ಹಂಸಲೇಖಾ ಅವರ ಜೊತೆಯಲ್ಲಿದ್ದವರು ಸ್ವತಃ ರಂಗಸಂಗೀತ ನಿರ್ದೇಶಕರೂ ಕೂಡ, ಇವರು 'ಧರ್ಮಭೂಮಿ ಕಲಾಸಂಘ' ಎಂಬ ರಂಗತಂಡ ಕಟ್ಟಿ ಹಲವೆಡೆ ರಂಗಪ್ರಯೋಗ ನಡೆಸಿದ್ದಾರೆ. ಗಂಗಾಚರಣ ಒಬ್ಬ ಪ್ರತಿಭಾವಂತ ರಂಗಸಂಗೀತ ನಿರ್ದೇಶಕ. ಇವರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಹೆಚ್.ಡಿ.ಗುರುಪ್ರಸಾದ್ ರಂಗಭೂಮಿ ಆಸಕ್ತರು, ಇವರು ಹೊಳೆನರಸೀಪುರದ ಸಹ್ಯಾದ್ರಿ ಕಲಾಬಳಗ, ವಿನಾಯಕ ಕಲಾಸಂಘಗಳ ಸಕ್ರಿಯ ಸದಸ್ಯರು. ಹಾಸನದ



ರಂಗಸಿರಿ ಕಲಾತಂಡದೊಡನೆ ಗುರುತಿಸಿಕೊಂಡು ರಂಗಭೂಮಿಯ ಕೆಲಸ ಮಾಡಿದ್ದಾರೆ. ರಾಜ್ಯಮಟ್ಟದಲ್ಲಿ 150ಕ್ಕೂ ಹೆಚ್ಚು ಬೀದಿ ನಾಟಕಗಳಲ್ಲಿ ಅಭಿನಯಿಸಿದ ಅನುಭವ ಇವರಿಗಿದೆ. 50ಕ್ಕೂ ಹೆಚ್ಚು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕಂಬಾರರ ಜೋಕುಮಾರಸ್ವಾಮಿ ನಾಟಕದಲ್ಲಿ ಪ್ರಮುಖ ಪಾತ್ರಧಾರಿ. ಅಲ್ಲದೆ ಸಹ್ಯಾದ್ರಿ ಕಲಾಬಳಗದಲ್ಲಿ "ಧರಣಿಮಂಡಲ ಮಧ್ಯದೊಳಗೆ" "ಒಂದು ಹೆಣದ ಕಥೆ' 'ಹುಡುಕಾಟ-ತಡಕಾಟ' ಮುಂತಾದ ನಾಟಕಗಳಲ್ಲಿ ಹಲವು ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಅಭಿನಯಿಸಿದ ಅನುಭವ ಇವರದು.

ಶಿವಕುಮಾರಾಚಾರ್ ಪೌರಾಣಿಕ ರಂಗಭೂಮಿಯಲ್ಲಿ ಗುರುತಿಸಿಕೊಂಡಿರುವ ಪ್ರತಿಭಾವಂತರು, ಪೌರಾಣಿಕ ನಾಟಕಗಳಲ್ಲಿ ಹೆಚ್ಚು ಪರಿಶ್ರಮ ಹೊಂದಿದವರು, ರಂಗ ಪರಿಷತ್‌ನ ತಾಲೂಕು ಘಟಕದ ಅಧ್ಯಕ್ಷರೂ ಹೌದು.

ಹಳೇಕೋಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದ ನೌಕರಿಯಲ್ಲಿದ್ದುಕೊಂಡು ರಂಗಭೂಮಿ ಕೆಲಸ ಮಾಡುತ್ತಾ ಬರುತ್ತಿರುವ ಪುಟ್ಟೇಗೌಡ ಅವರು ಸಾಮಾಜಿಕ ಹಾಗೂ ಪೌರಾಣಿಕ ರಂಗಭೂಮಿಯಲ್ಲಿ ಗುರುತಿಸಿಕೊಂಡು ಕೆಲಸ ಮಾಡುತ್ತಿರುವವರು. ಇವರು ಕಲೆಯಕೊಲೆ, ಧರ್ಮಸಾಮರಸ್ಯ, ಅಳಿಯದೇವರು, ಪಂಚಭೂತ, ಟ್ರಿಬ್ಬಲ್‌ತಾಳಿ ಮುಂತಾದ ಸಾಮಾಜಿಕ ನಾಟಕಗಳಲ್ಲಿಯೂ ರತಿಕಲ್ಯಾಣ, ರುಕ್ಕಿಣಿ ಸ್ವಯಂವರ, ಶನಿಮಹಾತ್ಮ, ತ್ರಿಜನ್ಮ ಮೋಕ್ಷ ಮುಂತಾದ ಪೌರಾಣಿಕ ನಾಟಕಗಳಲ್ಲೂ ಅಭಿನಯಿಸಿದ್ದಾರೆ.

## ಅರಸೀಕೆರೆ ರಂಗಭೂಮಿ ಇತಿಹಾಸ

ಈಗ್ಗೆ ಸುಮಾರು 50 ವರ್ಷಗಳ ಹಿಂದೆ ತಾಲೂಕಿನ ಕಾಮಸಮುದ್ರದ ದಿ.ಸೀನಪ್ಪ ಎಂಬುವವರು ಗುಬ್ಬಿ ಕಂಪನಿಯಲ್ಲಿ ಹಾರ್ಮೋನಿಯಂ ಕಲಾವಿದರಾಗಿ ಕೆಲಸ ನಿರ್ವಹಿಸುತ್ತಿದ್ದರು. ಇವರು ಅರಸೀಕೆರೆಯಲ್ಲಿ ನೂರಾರು ನಾಟಕಗಳನ್ನು ಕಲಿಸಿ ಅಭಿನಯಿಸುತ್ತಿದ್ದರು. ರಾಜಸೂಯಯಾಗ, ವೀರಾಭಿಮನ್ಯು, ಕುರುಕ್ಷೇತ್ರ ಕವಿರತ್ನ ಕಾಳಿದಾಸ, ಸಂಪೂರ್ಣ ರಾಮಾಯಣ, ಮಹಾಭಾರತ ಇನ್ನೂ ಮುಂತಾದ ಪೌರಾಣಿಕ ನಾಟಕಗಳನ್ನು ನಿರ್ದೇಶಿಸಿದ್ದರು.

ಆ ವೃತ್ತಿಯನ್ನು ಅವರ ಪುತ್ರ ದಿ. ಶ್ರೀ ನರಸಿಂಹಮೂರ್ತಿ ಮುಂದುವರಿಸಿದ್ದಾರೆ. ನಾಟಕ ರಂಗ ಕಲೆಗಳಲ್ಲಿ ಪ್ರಮುಖ ಪಾತ್ರ ವಹಿಸಿ ನೂರಾರು ಜನ ರಂಗ ಶಿಷ್ಯರನ್ನು ತಾಲೂಕಿನಾದ್ಯಂತ ಬೆಳೆಸಿದರು. ಅವರಲ್ಲಿ ಪ್ರಮುಖರಾದವರು ಪುಟ್ಟಣ್ಣಯ್ಯ (ಮೈಸೂರು ರಂಗಾಯಣ ಕಲಾವಿದರು) ದಿರಿನ ತಬಲ ನಿಂಗಪ್ಪ, ಸೀತಾಪುರದ ಕೀ ಬೋರ್ಡ್ ವಾದಕ ಕೊಟ್ಟೂರಪ್ಪ, ಯೆರಗೇನಳ್ಳಿ ಕೊಳಲು ವಾದಕ ದಿ.ಸೋಮಶೇಖರಪ್ಪ ಇನ್ನೂ ಹತ್ತು ಹಲವಾರು ಜನ.

ನಾಟಕ ಕಲೆಯಲ್ಲಿ ಹೆಸರುವಾಸಿಯಾದವರು 89 ವರ್ಷದ ಪಂಡಿತ್ ಶಿವಶಂಕರ್, ದೊಡೇನಳ್ಳಿ ಬಸವರಾಜ್ ಪೌರಾಣಿಕ ನಾಟಕಗಳನ್ನಾಡಿದ್ದಾರೆ, ಪೌರಾಣಿಕ ನಾಟಕಗಳನ್ನು ಇಂದಿಗೂ ನಿರ್ದೇಶಿಸುವ ಟಿ. ಕೋಡಿಹಳ್ಳಿಯ ಶ್ರೀ ವೀರಭದ್ರಪ್ಪನವರು, ಪೌರಾಣಿಕ ನಾಟಕಗಳಿಗೆ ಸೀನರಿ ಒದಗಿಸುವ ಬಂದೂರು ಡ್ರಾಮ ಸೀನರಿ ಈಗಲೂ ಹೆಸರುವಾಸಿ.

ಅರಸೀಕೆರೆ ಸ್ಥಳೀಯ ಹಾಲಿ ಶಾಸಕರಾದ ಶ್ರೀ ಶಿವಲಿಂಗೇಗೌಡರು, ಸ್ಥಳೀಯ ಖ್ಯಾತ ಉದ್ಯಮಿ ಸಮಾಜ ಸೇವಕರಾದ ಜೆ.ಪಿ.ಎನ್. ಜಯಣ್ಣನವರು, ಸಹ್ಯಾದ್ರಿ ದೇವರಾಜ್, ಮೊದಲಾದವರು ನಾಟಕ ರಂಗದಲ್ಲಿ ಹೆಸರುವಾಸಿಯಾದವರು.

ಕಣಕಟ್ಟೆಯ ಕುಮಾರ್ ಮತ್ತು ತಂಡ ಗಾನ ದುಂದುಭಿ ಕಲಾ ವೃಂದವನ್ನು ಸ್ಥಾಪಿಸಿ ಇಲ್ಲಿವರೆಗೆ ಬಸ್ ಕಂಡಕ್ಟರ್, ಗೌಡರ ಗದ್ದಲ, ಅಣ್ಣ-ತಂಗಿ, ಚಿನ್ನದ ಗೊಂಬೆ,



ರತ್ನ ಮಾಂಗಲ್ಯ, ಮುದುಕನ ಮದುವೆ, ತ್ಯಾಗಿ, ಅಸಲೀ ನಕಲಿ, ಮೊದಲಾದ ನಾಟಕಗಳನ್ನಾಡಿದ್ದಾರೆ.

ಖ್ಯಾತ ಕೊಬ್ಬರಿ ಕಲಾವಿದರಾದ ಶ್ರೀ ಎಲ್.ಹರೀಶ್ ಕುಮಾರ್‌ರವರು ನೀನಾಸಂ ಕಲಾದವಿರು. ದಂಗೆಯ ಮುಂಚಿನ ದಿನಗಳು, ಕತ್ತಾಲ ದಾರಿ ದೂರ ಇನ್ನೂ ಮೊದಲಾದ ನಾಟಕಗಳಲ್ಲಿ ಪಾಲ್ಗೊಂಡು ತಮ್ಮ ಕಲಾನೈಪುಣ್ಯತೆಯನ್ನು ಪ್ರದರ್ಶಿಸಿದವರಲ್ಲಿ ಪ್ರಮುಖರು.

ಒಂದಷ್ಟು ವರ್ಷಗಳ ನಂತರ ಸ್ನೇಹಕಲಾ ಸಂಪದ ಎಂಬ ಸಂಘ ಕಟ್ಟಿಕೊಂಡ ಸಮಾನ ಮನಸ್ಕರ ತಂಡ ಅರಸೀಕೆರೆಯಲ್ಲಿ ಒಂದಷ್ಟು ಸಾಮಾಜಿಕ ನಾಟಕಗಳನ್ನು ಆಡಿ, ಜೊತೆಗೆ ನೀನಾಸಂ ಮೊದಲಾದೆಡೆಯಿಂದ ತಂಡಗಳನ್ನು ಕರೆಸಿ ಆಡಿಸಿತು. ಅವುಗಳೆಂದರೆ 'ಕತ್ತಾಲ ದಾರಿ ದೂರ, ದಂಗೆಯ ಮುಂಚಿನ ದಿನಗಳು, ಒಂದು ಪಯಣದ ಕತೆ ಮೊದಲಾದವು.

ಅರಸೀಕೆರೆಯಲ್ಲಿ 'ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿ'ನ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಪುಸ್ತಕ ಕಮಿಟಿ ಅಧ್ಯಕ್ಷರಾಗಿ, ಅರಸೀಕೆರೆ ಸೇರಿ ರಾಜ್ಯದಾದ್ಯಂತ ವಿಜ್ಞಾನ ಚಳುವಳಿಯನ್ನು ಹರಡಲು ಕಾರಣರಾದ ಶ್ರೀ ಡಾ.ಹೆಚ್.ಆರ್.ಸ್ವಾಮಿಯವರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರೂ ಆಗಿದ್ದವರು. ಅವರು ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಲಂಕೇಶರ 'ಪ್ರತಿಮಾ ನಾಟಕ ರಂಗದಲ್ಲಿ ತರಬೇತಿ ಪಡೆದು ರಂಗಭೂಮಿ ಬಗ್ಗೆ ಆಗಿನಿಂದಲೇ ಆಸಕ್ತರಾದವರು. ಸಾಕ್ಷರತಾ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ, ಅನೇಕ ಬೀದಿ ನಾಟಕಗಳನ್ನು ಬರೆದು, ನಿರ್ದೆಶಿಸಿ, ಜನರಲ್ಲಿ ಅರಿವು ಮೂಡಿಸಿದವರು. ವಿಜ್ಞಾನಪ್ಪ ಬಿಡುಗಡೆ, ಕಾಲರ, ಜಪ್ತಿ, ಪತ್ರ, ಸರಸ್ವತಿ ಹೀಗೆ ಸುಮಾರು 400ಕ್ಕೂ ಹೆಚ್ಚು ಬೀದಿ ನಾಟಕಗಳಲ್ಲಿ ಅಭಿನಯಿಸಿದವರು.

ಅಕಾಡೆಮಿ ಸದಸ್ಯರಾಗಿದ್ದಾಗ 'ಮಹಾಮಾಯಿ' ಎಂಬ ನಾಟಕವೊಂದನ್ನು ನಿರ್ಮಾಣ ಮಾಡಿದ್ದು ಮೈಲಿಗಲ್ಲು. ಜೀವನ್ ರಾಂ ನಿರ್ದೇಶನದಲ್ಲಿ ನಿರ್ಮಾಣಗೊಂಡ ಈ ನಾಟಕ ರಾಜ್ಯದ ನಾನಾ ಕಡೆ ಪ್ರದರ್ಶನಗೊಂಡು ಹಲವು ಬಹುಮಾನಗಳನ್ನೂ ಗಳಿಸಿತು.

ಮೂಡಬಿದ್ರೆಯ ಸಾಹಿತ್ಯ ಸಮ್ಮೇಳನ, ಬಂಟ್ವಾಳ, ಸುಳ್ಯ ರವೀಂದ್ರ ಕಲಾಕ್ಷೇತ್ರದಲ್ಲಿ ಶೋ ಕೊಟ್ಟಿದ್ದು ಉಡುಪಿಯ 'ರಂಗಭೂಮಿ' ಸಂಸ್ಥೆ ಆಯೋಜಿಸುವ ರಾಜ್ಯ ಮಟ್ಟದ ನಾಟಕೋತ್ಸವದಲ್ಲಿ ತೃತೀಯ ಬಹುಮಾನ ಗಳಿಸಿದ್ದು ನೆನಪುಗಳಲ್ಲೊಂದು.

ಆ ನಂತರವೂ ಈಗಲೂ 'ಮತದಾನ'ದ ಬಗ್ಗೆ ಅರಿವು ಮೂಡಿಸಲು ತಂಡ



ಬೀದಿ ನಾಟಕಗಳನ್ನು ಆಡಿಸುತ್ತಲೇ ಇದೆ. ಹಾಗೂ ವಿಜ್ಞಾನ ಪರಿಷತ್ತು ನಡೆಸುವ ರಾಜ್ಯ ಮಟ್ಟದ ಕಾರ್ಯಕ್ರಮಗಳಲ್ಲಿ ಹೆಚ್.ಆರ್.ಸ್ವಾಮಿಯವರು ಐ.ಕೆ.ಬೋಳುವಾರ್ ಮೌನೇಶ್ ವಿಶ್ವಕರ, ರಂಗಾಯಣದ, ಅರಸೀಕೆರೆಯ ತಂಡಗಳನ್ನು ಕರೆಸಿ ನಾಟಕಗಳನ್ನು ಆಡಿಸುತ್ತಲೇ ಇದ್ದಾರೆ. ನಾಟಕೋತ್ಸವಗಳನ್ನು ಆಯೋಜಿಸುತ್ತಿದ್ದಾರೆ.

ಆ ನಂತರ ಮಮತಾರಾಣಿ ಅಧ್ಯಕ್ಷತೆಯಲ್ಲಿ 'ಅರಸೀ ಸಾಂಸ್ಕೃತಿಕ ವೇದಿಕೆಯನ್ನು ಕಟ್ಟಿದ ಮಮತಾ ಅರಸೀಕೆರೆ ಮಕ್ಕಳಿಗಾಗಿ ರಂಗಭೂಮಿ ಎಂಬ ಪರಿಕಲ್ಪನೆಯನ್ನಿಟ್ಟು ಕೊಂಡು ಹತ್ತಾರು ನಾಟಕಗಳನ್ನಾಡಿಸಿದರು. ನಾಟಕ ಅಕಾಡೆಮಿ ಪ್ರಾಯೋಜಿತ ರಸಗ್ರಹಣ ಶಿಬಿರ ನಡೆಸಿ ಕಾಲೇಜು ವಿದ್ಯಾರ್ಥಿಗಳಿಗಾಗಿ 'ಯುಗಾಚಾರ್ಯ' ನಾಟಕಗಳನ್ನು ನಿರ್ಮಿಸಿದ್ದಾಯಿತು. ಈ ನಾಟಕಗಳು ರವೀಂದ್ರ ಕಲಾಕ್ಷೇತ್ರ ಸೇರಿದಂತೆ ಅನೇಕ ಸ್ಥಳಗಳಲ್ಲಿ ಪ್ರದರ್ಶನಗೊಂಡವು.

ಸ್ವತಃ ಕಲಾವಿದೆಯಾಗಿ ಮಹಾಮಾಯಿ, ಒಂದು ಬೊಗಸೆ ನೀರು ಹಾಗೂ ಬೆಂಗಳೂರಿನ ಪ್ರಾದೇಶಿಕ ಕಚೇರಿ 'ರಾಷ್ಟ್ರೀಯ ನಾಟಕ ಶಾಲೆ' ನಡೆಸಿದ 3 ತಿಂಗಳ “ಶಿಕ್ಷಣದಲ್ಲಿ ರಂಗ ಕಲೆ' ಶಿಬಿರದಲ್ಲಿ ಪಾಲ್ಗೊಂಡು 'ಸ್ಟೋನ್ ಸೂಪ್' ನಾಟಕದಲ್ಲೂ ಅಭಿನಯಿಸಿದ್ದಾರೆ.

ನಾಟಕೋತ್ಸವಗಳನ್ನು ಆಯೋಜಿಸಿ, ಸಾಣೇಹಳ್ಳಿ ತಂಡ, ಬೆಂಗಳೂರು, ಹಾವೇರಿ, ಸಕಲೇಶಪುರದ ತಂಡಗಳನ್ನು ಕರೆಸಿ ಪ್ರದರ್ಶಿಸಿದ್ದಾರೆ. ಈಗಲೂ ಅಸ್ತಿತ್ವದಲ್ಲಿರುವ ವೇದಿಕೆ ಪ್ರತೀ ವರ್ಷ ನಾಟಕೋತ್ಸವ ಆಯೋಜಿಸುವ, ಮಕ್ಕಳ ನಾಟಕಗಳನ್ನು ನಿರ್ಮಿಸುವ ಗುರಿ ಹೊಂದಿದೆ.

## ಆಲೂರು ರಂಗ ಇತಿಹಾಸ

ಆಲೂರು ತಾಲೂಕಿನಲ್ಲಿಯು ರಂಗಚಟುವಟಿಕೆಗಳು ಸಕ್ರಿಯವಾಗಿ ನಡೆಯುತ್ತಿವೆ. 1950ರಲ್ಲಿ ಜನಿಸಿದ ಧರಣಿಕುಮಾರ್ ಅವರು ಕೆಲನಾಟಕಗಳನ್ನು ರಚಿಸಿದರು. 'ಬೆಳಕು ಹರಿಯಿತು', 'ಅವಳೇ ನನ್ನವಳು', 'ಕೀರ್ತಿದಾಹ' 'ಬೆಟ್ಟದ ಭೈರವ' ಎಂಬ ನಾಟಕಗಳನ್ನು ಅವರು ಬರೆದಿದ್ದಾರೆ.

ಕದಾಳಿನಲ್ಲಿ ಜನಿಸಿದ ಕದಾಳು ಮೊಗಣ್ಣನವರು ನಾಟಕ ರಚಿಸುವ ನಿರ್ದೆಶಿಸುವ ಹವ್ಯಾಸ ಹೊಂದಿದ್ದರು. ಅಂದಿಗೆ ರಂಗಭೂಮಿಯಲ್ಲಿ ಜನಪ್ರಿಯರಾಗಿದ್ದ ಇವರು 'ಯಕ್ಷಗಾನ ಐರಾವತ' ಎಂಬ ಪ್ರಸಂಗ ಬರೆದು ಪ್ರದರ್ಶಿಸಿದ್ದರು.

ಆಲೂರು ತಾ, ಹೊನ್ನಾಪುರದಲ್ಲಿ 1925ರಲ್ಲಿ ಜನಿಸಿದ ಎ.ಜಿ.ಸುಬ್ಬರಾವ್ “ಕಾಲಿಂಗ್‌ಬೆಲ್', 'ಗಂಡಾಂತರ' ಎಂಬ ನಾಟಕಗಳನ್ನು ಬರೆದಿದ್ದಾರೆ. ಹವ್ಯಾಸಿ ರಂಗಭೂಮಿಯಲ್ಲಿ ದಿ.ಕೆ.ಪಿ.ಚಿಕ್ಕೇಗೌಡ, ಬಾಳೇರ ಕೊಪ್ಪಲಿ ಸಾಹೇಬ್, ಕಣತೂರಿನ ಮೊಹಿದ್ದೀನ್ ಪ್ರಮುಖರು. ಡಾ.ವಳಗರಹಳ್ಳಿ ವಿಶ್ವನಾಥ್ ಅವರು 'ಬೆಟ್ಟದನೆಲ್ಲಿ' ಎಂಬ ನಾಟಕ ಬರೆದಿದ್ದಾರೆ.

ಕಲಾವಿದರಾದ ಎಸ್.ನಾಗರಾಜ್, ಹಾಸನದ ದರ್ಶನ್ ವೆಂಕಟೇಶ್, ಇವರು ತಾಲೂಕಿನ ಹಂಪನಕಟ್ಟೆಯವರು. ಕಲಾವಿದರಾಗಿ ಹೆಸರು ಮಾಡಿದವರು. ಜೋಕುಮಾರಸ್ವಾಮಿ ನಾಟಕದಲ್ಲಿನ ಇವರ 'ಬಸಣ್ಣನ ಅಭಿನಯ ಸ್ಮರಣೀಯ.

ಇತ್ತೀಚೆಗೆ ನಿಧನರಾದ ಅ.ಶಾ.ಬಸವರಾಜು ಅವರ 'ಹೊಂಗೆ ಕಲಾಸಂಘ', ಮಮತಾ ಅವರ ಝಾನ್ಸಿ ಯುವತಿ ಮಂಡಲಿ, ಕೆಂಚಮ್ಮನ ಹೊಸಕೋಟೆಯ ಕೆಂಚಾಂಬ ಕಲಾಸಂಘ, ಕುಂದೂರಿನ 'ಧರಣಿ ಕಲಾಸಂಘ'

ಮರಸು ಯುವಕ ಸಂಘ, ಬೆಡಚವಳ್ಳಿ ಕಲಾವಿದರು ಹವ್ಯಾಸಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಕಣತೂರಿನ ಶೇಷಕಲಾಸಂಘ ಇತ್ತೀಚೆಗೆ ಸಕ್ರಿಯವಾಗಿಲ್ಲ.



## ರಂಗ ವಿಮರ್ಶೆ ಕೃತಿಗಳು

ಹಾಸನ ಜಿಲ್ಲೆಯಲ್ಲಿ ರಂಗ ವಿಮರ್ಶೆ ಅಷ್ಟಾಗಿ ಬೆಳೆದಿಲ್ಲ. ಆದರೆ ರಂಗಪ್ರಯೋಗಗಳು, ರಂಗೋತ್ಸವಗಳು ನಡೆದಾಗ ರಾಜ್ಯ, ಜಿಲ್ಲಾ ಪತ್ರಿಕೆಗಳಲ್ಲಿ ಪತ್ರಿಕಾ ವರದಿಗಳು ಪ್ರಕಟವಾಗುತ್ತವೆ. ಆದರೆ ದುರದೃಷ್ಟವೆಂದರೆ ರಾಜ್ಯಮಟ್ಟದ ಈ ರಂಗಭೂಮಿ ಕುರಿತ ಪತ್ರಿಕಾ ವರದಿಗಳು ಜಿಲ್ಲಾಸುದ್ದಿಗಳಾಗಿ ಮಾತ್ರ ವರದಿಯಾಗುವುದರಿಂದ ಜಿಲ್ಲೆಯಲ್ಲಿ ನಡೆಯುವ ರಂಗಸುದ್ದಿ ರಾಜ್ಯದ ರಂಗಾಸಕ್ತರಿಗೆ ತಿಳಿಯುವುದೇ ಇಲ್ಲ. ಹೀಗಾಗಿ ಹಾಸನ ಜಿಲ್ಲೆಯಲ್ಲಿ ರಂಗಚಟುವಟಿಕೆಗಳೇ ನಡೆಯುವುದಿಲ್ಲ ಎಂದು ರಂಗಾಸಕ್ತರು ತಿಳಿಯುತ್ತಾರೆ. ಆದರೆ ಜಿಲ್ಲೆಯಲ್ಲಿ ನಡೆಯುವ ರಂಗಪ್ರಯೋಗ ಕುರಿತು, ಅಪ್ಪಾಜಿಗೌಡ, ಗೊರೂರು ಅನಂತರಾಜು, ಶಿವಶಂಕರಪ್ಪ, ರಘುಚಂದ್ರಭಟ್ ಮುಂತಾದವರು ರಂಗ ವಿಮರ್ಶೆ ಮಾಡಿದ್ದಾರೆ.

ರಕ್ಷಿದಿ ಪ್ರಸಾದ್ ಅವರು ಬರೆದ 'ಬೆಳ್ಳಕೆರೆ ಹಳ್ಳಿ ಥಿಯೇಟರ್' ಎಂಬ ಗ್ರಂಥ ಜಿಲ್ಲೆಯ ರಂಗಚಟುವಟಿಕೆಗಳ ದೃಷ್ಟಿಯಿಂದ ಗಮನಿಸಬೇಕಾದ ಕೃತಿ. ಈ ಕೃತಿ ಸಕಲೇಶಪುರದ ಸುತ್ತಣ ರಂಗಚಟುವಟಿಕೆ, ರಂಗಭೂಮಿಯ ಅನುಭವ ವಿಶೇಷವನ್ನು ಹೇಳುವ ಈ ಕೃತಿಯಲ್ಲಿ ಅನೇಕ ಗಮನಾರ್ಹ ಅಂಶಗಳಿವೆ. ಈ ಕೃತಿ ಧಾರಾವಾಹಿ ರೂಪದಲ್ಲಿ ಕರವೇ ಪತ್ರಿಕೆಯಲ್ಲಿ ಪ್ರಕಟವಾದದ್ದು ಈ ಕೃತಿಯ ವಿಶೇಷ. ರಂಗಭೂಮಿಯನ್ನು ಮಲೆನಾಡಿನ ಒಂದು ಪುಟ್ಟ ಹಳ್ಳಿಯಲ್ಲಿ ಕಟ್ಟುವ ಸಂದರ್ಭದಲ್ಲಿ ಉಂಟಾಗುವ ತೊಡಕುಗಳು, ರಂಗಶಿಬಿರದಲ್ಲಿ ಅನುಭವ ವಿಶೇಷಗಳನ್ನು ಈ ಕೃತಿಯಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ.

ಹಾಸನ ಜಿಲ್ಲೆಯ ರಂಗವಿಮರ್ಶೆ ದೃಷ್ಟಿಯಿಂದ ಹೆಸರಿಸಲೇಬೇಕಾದ ಇನ್ನೊಂದು ಕೃತಿ ಗೊರೂರು ಅನಂತರಾಜು ಅವರ 'ರಂಗಪ್ರಯೋಗ'. ಜಿಲ್ಲೆಯಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ, ಸಾಹಿತ್ಯಕ ವಿಚಾರಗಳ ವಿಮರ್ಶೆ, ದಾಖಲೀಕರಣದ ಕೆಲಸವನ್ನು ಅನಂತರಾಜು ಅತ್ಯಂತ ಶ್ರದ್ಧಾಭಕ್ತಿಯಿಂದ ಮಾಡುತ್ತಾ ಬಂದಿದ್ದಾರೆ. ವೃತ್ತಿಯಲ್ಲಿ ಸರ್ಕಾರಿ ನೌಕರ, ಪ್ರವೃತ್ತಿಯಲ್ಲಿ ನಾಟಕಕಾರ, ನಟ, ನಿರ್ದೇಶಕ.

# ರಂಗ ಮಂದಿರಗಳು

ಹಾಸನ ಜಿಲ್ಲೆಯ ರಂಗಕಲಾವಿದರಿಗೆ ಇರುವ ದೊಡ್ಡ ಕೊರತೆ ರಂಗ ಮಂದಿರಗಳದು. ಸಮೃದ್ಧ ನೈಸರ್ಗಿಕ ಸಂಪನ್ಮೂಲ ಹೊಂದಿರುವ ಈ ಜಿಲ್ಲೆ ರಾಜಕೀಯವಾಗಿ ಮುಂದು, ಸಾಂಸ್ಕೃತಿಕವಾಗಿ ಹಿಂದು, ರಾಜಕೀಯ ವ್ಯಕ್ತಿಗಳಿಗೆ ಮಣೆ ಹಾಕುವ ಪ್ರವೃತ್ತಿ ಹೆಚ್ಚು, ಜಿಲ್ಲೆಯಾದ್ಯಂತ ಸಾಕಷ್ಟು ರಂಗ ಚಟುವಟಿಕೆಗಳೇನೋ ನಿರಂತರವಾಗಿ ನಡೆಯುತ್ತಿವೆ. ಜಿಲ್ಲೆಯಾದ್ಯಂತ ಅನೇಕ ರಂಗತಂಡಗಳು ಸಕ್ರಿಯವಾಗಿವೆ. ರಾಜ್ಯದ ವಿವಿಧೆಡೆ ನಾಟಕೋತ್ಸವಗಳಲ್ಲಿ, ನಾಟಕ ಸ್ಪರ್ಧೆಯಲ್ಲಿ ಜಿಲ್ಲೆಯ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ಆದರೆ ಹಾಸನ ಜಿಲ್ಲೆಯಲ್ಲಿ ಎಲ್ಲಿಯೂ ತಮ್ಮ ನಾಟಕಗಳನ್ನು ಪ್ರಯೋಗಿಸಲು ಸುಸಜ್ಜಿತ ರಂಗಮಂದಿರಗಳಿಲ್ಲ. ಇರುವ ಏಕೈಕ ರಂಗಮಂದಿರ ಹಾಸನದ ಕೇಂದ್ರಭಾಗದಲ್ಲಿರುವ ಹಾಸನಾಂಬ ಕಲಾಕ್ಷೇತ್ರ ನಗರದ ಹೃದಯಭಾಗದಲ್ಲಿದ್ದರೂ ಮೂಲಸೌಕರ್ಯಗಳ ಕೊರತೆ ಇದೆ. ಸರಿಯಾದ ಬೆಳಕಿನ ವ್ಯವಸ್ಥೆ ಇಲ್ಲ. ಉತ್ತಮ ಧ್ವನಿ ವ್ಯವಸ್ಥೆ ಇಲ್ಲ, ಕಲಾತಂಡಗಳು ತಾಲೀಮು ನಡೆಸಲು ಪ್ರತ್ಯೇಕ ಷೆಡ್‌ಗಳಿಲ್ಲ. ನಾಟಕದ ರಿಹರ್ಸಲ್ ನಡೆಸಲು ಕಲಾ ತಂಡಗಳು ಹರಸಾಹಸ ಪಡಬೇಕಾಗುತ್ತದೆ. ಇರುವ ಒಂದೇ ಒಂದು ಕಲಾಮಂದಿರದಿಂದಾಗಿ ನಗರದ ಶಾಲಾಕಾಲೇಜಿನ ವಾರ್ಷಿಕೋತ್ಸವಕ್ಕೋ, ಖಾಸಗಿಯವರ ಕಾರ್ಯಕ್ರಮಕ್ಕೋ ಕಾಯ್ದಿರಿಸಿದರೆ ರಂಗಚಟುವಟಿಕೆ ನಡೆಸಲು ಕಷ್ಟವಾಗುತ್ತದೆ. ಆದುದರಿಂದ ಹಾಸನದಲ್ಲಿಯೇ ಪರ್ಯಾಯ ಕಲಾಮಂದಿರದ ಅವಶ್ಯಕತೆ ಇದೆ. ಈ ಕೆಲಸ ತುರ್ತಾಗಿ ಆಗಬೇಕಾಗಿದೆ.

ಇನ್ನು ತಾಲೂಕುಗಳಲ್ಲಿರುವ ರಂಗತಂಡಗಳ ಸ್ಥಿತಿಯಂತೂ ಹೇಳತೀರದು. ಕಲಾತಂಡಗಳು ನಾಟಕೋತ್ಸವವನ್ನೋ, ಸಾಂಸ್ಕೃತಿಕ ಉತ್ಸವವೋ ಏರ್ಪಡಿಸಬೇಕಾದರೆ ಸರ್ಕಾರಿ ಶಾಲೆಗಳ ಆಟದ ಮೈದಾನವನ್ನು ಸಂಜೆಯ ವೇಳೆ ಬಿಟ್ಟು ಕೊಡುವಂತೆ ತಾಲೂಕು ಆಡಳಿತದವರನ್ನು ಗೋಗರೆಯಬೇಕು. ಅವರ ಕಛೇರಿ ಮೆಟ್ಟಿಲು ಸವೆಸಬೇಕು. ಅವರೇನಾದರೂ ದೇವರು ವರಕೊಟ್ಟಂತೆ ಅನುಮತಿ ಕೊಟ್ಟರೆ ಸಾಂಸ್ಕೃತಿಕ ಉತ್ಸವ ಏರ್ಪಡಿಸಬಹುದು. ಇಲ್ಲವಾದರೆ ಇಲ್ಲ. ಇನ್ನು ವೇದಿಕೆ ನಿರ್ಮಾಣಕ್ಕೆ, ವೇದಿಕೆಯ

ಸಿದ್ಧತೆ, ಪ್ರೇಕ್ಷಕರ ಗ್ಯಾಲರಿಗೆ ಹಾಕಿಸಬೇಕಾದ ಕುರ್ಚಿ ವೇದಿಕೆ ಬಾಡಿಗೆ ದುಬಾರಿ. ಈ ವೇದಿಕೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮತ್ತೆ ಹರಸಾಹಸ ಪಡಬೇಕು. ಇಷ್ಟಾದ ಮೇಲೆ ವರುಣನ ಕೃಪೆಯಾದರಂತು ರಂಗ ಕಲಾವಿದರ ಪಾಡು ಪಂಚಂಪಾಡು. ಈ ನಡವೆ ಬೇರೆ ಬೇರೆ ಕಡೆಯಿಂದ ಬರುವ ರಂಗ ತಂಡದವರಿಗೆ ಮೂಲಭೂತ ಸೌಕರ್ಯ ಕಲ್ಪಿಸಿಕೊಡಲಾಗದೆ ಅವರಿಂದ ಛೀಮಾರಿ ಹಾಕಿಸಿಕೊಳ್ಳುವ ಸರದಿ ಬೇರೆ.

ಈ ಸ್ಥಿತಿಯಲ್ಲದೆ ತಾಲ್ಲೂಕು ಕೇಂದ್ರಗಳ ದುಸ್ಥಿತಿ, ಚನ್ನರಾಯಪಟ್ಟಣದಲ್ಲಿ ರಂಗ ಮಂದಿರಕ್ಕಾಗಿ ಕಲಾವಿದರ ಮೊರೆ ಯಾವ ರಾಜಕಾರಣಿಗೂ, ತಾಲ್ಲೂಕು ಆಡಳಿತಕ್ಕೂ ಕೇಳಿಸಿಯೇ ಇಲ್ಲ. ಚನ್ನರಾಯಪಟ್ಟಣದಲ್ಲಿ ರಂಗಮಂದಿರಕ್ಕೆ ಒಂದು ಜಾಗವನ್ನು ನಿಗಧಿ ಮಾಡವುದೂ ಸರ್ಕಾರಕ್ಕೆ ಇದುವರೆಗೆ ಸಾಧ್ಯವಾಗಿಲ್ಲ. ತಾಲ್ಲೂಕಿನ ಕಲಾವಿದರು ಕಲಾಮಂದಿರಕ್ಕಾಗಿ ಅನೇಕ ಬಗೆಯ ಚಳುವಳಿ ಮಾಡಿ ನಿತ್ರಾಣರಾಗಿದ್ದಾರೆ.

ಇನ್ನು ಹೊಳೆನರಸೀಪುರ, ಅರಸೀಕೆರೆ, ಆಲೂರು, ಅರಕಲಗೂಡು ಈ ಎಲ್ಲ ತಾಲ್ಲೂಕುಗಳ ದುಸ್ಥಿತಿಯೂ ಇದೇ ಆಗಿದೆ. ಇಲ್ಲೆಲ್ಲ ರಂಗಚಟುವಟಿಕೆ ಇಲ್ಲದಿರುವುದಕ್ಕೆ ಇದೇ ಕಾರಣ, ಚನ್ನರಾಯಪಟ್ಟಣದಲ್ಲಿ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ನವೋದಯ ಶಿಕ್ಷಣ ಸಂಸ್ಥೆಯಲ್ಲಿ ತಲಾ ಒಂದೊಂದು ಬಯಲು ರಂಗಮಂದಿರ ಇದ್ದರೂ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುತ್ತಿದೆ. ಇನ್ನು ಬೇಲೂರಿನಲ್ಲಿ ರಂಗಮಂದಿರ ನಿರಾಣಕ್ಕಾಗಿ ಹಣವೇನೋ ನಿಗದಿ ಆಯಿತು. ಜಾಗ ನಿಗದಿಯಾಗದೆ ಬಂದ ಹಣ ಸರ್ಕಾರಕ್ಕೆ ವಾಪಸ್ಸು ಹೋಯಿತು.

ಇದ್ದುದರಲ್ಲಿ ರಂಗಮಂದಿರಗಳ ವಿಷಯದಲ್ಲಿ ಸಕಲೇಶಪುರವೇ ಉತ್ತಮ ಎಂದು ಹೇಳಬಹುದು. ಸಕಲೇಶಪುರದ ಹೃದಯ ಭಾಗದಲ್ಲಿ ಸುಬ್ಬೇಗೌಡರ ಪುರಭವನವಿದ್ದು ರಂಗಚಟುವಟಿಕೆಗಳಿಗೆ ಪರವಾಗಿಲ್ಲ. ಆದರೆ ಅದಕ್ಕೆ ವ್ಯವಸ್ಥಿತವಾದ ಸೀಲಿಂಗ್ ಮಾಡಿಸಿ ಪ್ರತಿಧ್ವನಿಸದಂತೆ ವ್ಯವಸ್ಥೆ ಮಾಡಬೇಕು. ಇದನ್ನು ಮಾಡವವರಾರು? ಇದು ಕಲಾವಿದರ ಮುಂದಿರುವ ಪ್ರಶ್ನೆ.

ಇದೀಗ ಬೆಳ್ಳಕೆರೆಯಲ್ಲಿ 'ಪೂರ್ಣಚಂದ್ರ ತೇಜಸ್ವಿ ರಂಗಮಂದಿರ' ಎಂಬ ಹೆಸರಿನ ಒಂದು ಸುಸಜ್ಜಿತ ಬಯಲು ರಂಗಮಂದಿರ ಇರುವುದು ಒಂದು ಆಶಾದಾಯಕ ವಿಷಯ. ಇದು ಸಾಧ್ಯವಾಗಿರುವುದು ಜೈ ಕರ್ನಾಟಕ ಸಂಘದ ಎಲ್ಲ ಪದಾಧಿಕಾರಿಗಳ ಪ್ರಯತ್ನದಿಂದ. ಅಲ್ಲಿರುವ ಎಸ್.ಕೆ.ಕರೀಂಖಾನ್ ಅವರ ನೆನಪಿನ ಒಂದು ಗ್ರಂಥಾಲಯ, ವಾಚನಾಲಯ ಜೊತೆಗೆ ಒಂದು ವಸತಿಗೃಹ, ಕಛೇರಿ ಸಂಕೀರ್ಣ ಎಲ್ಲ ಇರುವುದು ಗಮನಾರ್ಹವಾದ ವಿಚಾರ.



## ಹಾಸನ ರಂಗಭೂಮಿಗೆ ಚಿತ್ರರಂಗದ ನಂಟು

ಹಾಸನ ಜಿಲ್ಲೆಯಲ್ಲಿ ರಂಗಭೂಮಿಯಲ್ಲಿ ಗುರುತಿಸಿಕೊಂಡು ಆನಂತರದಲ್ಲಿ ಚಲನಚಿತ್ರಗಳಲ್ಲಿ ಗುರುತಿಸಿಕೊಂಡು ಕೆಲಸಮಾಡಿರುವ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಅರಸೀಕೆರೆಯ ದೊಡ್ಡಣ್ಣ, ಇವರ ಸೋದರ ಬಸವರಾಜು, ಹೊಳೆನರಸೀಪುರದ ಆರ್.ನಾಗೇಂದ್ರರಾವ್, ಬಾಲಕೃಷ್ಣ, ಶೃತಿಯ ತಾಯಂದಿರಾದ ರಾಧ, ರುಕ್ಮಿಣಿ, ಹೆಚ್.ವಿ.ಸರೋಜ, ಜಯಮ್ಮ, ಜೋಡಿಗುಬ್ಬಿಯ ಧೀರೇಂದ್ರಗೋಪಾಲ್, ಅರಕಲಗೂಡು ತಾಲ್ಲೂಕಿನ ಹೊನ್ನವಳ್ಳಿ ಕೃಷ್ಣ, ಅರಗಲ್ಲಿನ ಆರತಿ, ಬೇಲೂರು ರಾಘವೇಂದ್ರರಾವ್ ಮುಂತಾದವರ ರಂಗಭೂಮಿಯ ಸೇವೆಯನ್ನು ಮರೆಯುವಂತಿಲ್ಲ.

ಬಸವೇಗೌಡರು ಪುಟ್ಟಣ್ಣನವರ ಅಪೂರ್ಣ 'ಸಾವಿರ ಮೆಟ್ಟಿಲು' ಚಿತ್ರವನ್ನು ಸಂಪೂರ್ಣ ಮಾಡಿದ್ದನ್ನು ನಾವಿಲ್ಲಿ ಹೆಸರಿಸಬಹುದು. ಹೆಚ್.ಬಿ.ಜ್ವಾಲನಯ್ಯನವರು ನಾಟಕಕಾರರು ಹೇಗೋ ಹಾಗೆಯೇ 'ಮಹಾಶಿಲ್ಪಿ' ಚಲನಚಿತ್ರ ನಿರ್ಮಾಪಕರೂ ಹೌದು. ಅರಸೀಕೆರೆಯ ಹಾರನಹಳ್ಳಿ ರಾಜಾನಂದ ಅವರು ಹಿರಣ್ಣಯ್ಯ ಮಿತ್ರಮಂಡಳಿ, ಗುಬ್ಬಿ ಕಂಪನಿಗಳಲ್ಲಿ ರಂಗಭೂಮಿ ಸೇವೆ ಮಾಡಿ ಆನಂತರ ಚಿತ್ರರಂಗಕ್ಕೆ ಹೋಗಿ 318 ಸಿನಿಮಾಗಳಲ್ಲಿ ನಟಿಸಿದರು. ಟಿ.ಎನ್.ಬಾಲಕೃಷ್ಣ ಅವರು ಅರಸೀಕೆರೆಯಲ್ಲಿ 1913ರಲ್ಲಿ ಜನಿಸಿದರು. ಇವರು ಚಿತ್ರರಂಗಕ್ಕೆ ಸೇರುವ ಮೊದಲು ಕಂಪನಿ ನಾಟಕಗಳಿಗೆ ವಾಲ್‌ಮೋಸ್ಟ್ ಅಂಟಿಸುವ ಕೆಲಸ ಮಾಡಿದ್ದರು. ಇವರು ಕಂಪನಿ ನಾಟಕದಲ್ಲಿ ಗೇಟ್ ಕೀಪರ್ ಆಗಿಯೂ ಪರದೆ ಬರೆಯುವ ಕೆಲಸಕೂಡ ಮಾಡಿದವರು. ಆನಂತರದ ದಿನಗಳಲ್ಲಿ ಹಾಸ್ಯಪಾತ್ರಗಳ ಮೂಲಕ ಕನ್ನಡ ಚಲನಚಿತ್ರ ಭೂಮಿಕೆಯಲ್ಲಿ ಪ್ರಧಾನ ಪಾತ್ರ ವಹಿಸಿದರು. ಆನಂತರದಲ್ಲಿ ಅಭಿಮಾನ್ ಸ್ಟುಡಿಯೋ ಕಟ್ಟಿದ ಕೀರ್ತಿ ಇವರದು.

ರಾಘವೇಂದ್ರರಾಯರು ಬೇಲೂರಿನಲ್ಲಿ ಜನಿಸಿದವರು. 1929ರಲ್ಲಿ ಗುಬ್ಬಿ ಕಂಪನಿ ಸೇರಿ ಕುರುಕ್ಷೇತ್ರ ನಾಟಕದಲ್ಲಿ ಅಭಿನಯಿಸಿ ಹೆಸರು ಮಾಡಿದವರು. 'ರಂಗಮಂಚದ ದುರ್ಯೋಧನ' ಎಂಬ ಹೆಸರು ಸಂಪಾದಿಸಿದ್ದರು. ರಾಜಭಕ್ತಿ ನಾಟಕದಲ್ಲಿ ವಿಕ್ರಾಂತ, ಸದಾರಮೆಯಲ್ಲಿ ಕಲಹಂಸ ಪಾತ್ರಗಳನ್ನು ಯಶಸ್ವಿಯಾಗಿ ಅಭಿನಯಿಸಿದರು. ಆನಂತರ ದಿನಗಳಲ್ಲಿ ಚಿತ್ರರಂಗ ಪ್ರವೇಶಿಸಿದರು.



ರಾಧ, ರುಕ್ಮಿಣಿ ಎಂಬ ಅವಳಿ ಸೋದರಿಯರು ಹೊಳೆನರಸೀಪುರದಲ್ಲಿ ಜನಿಸಿದವರು. ಆನಂತರದಲ್ಲಿ ರಂಗಭೂಮಿಯ ನಟಿಯರಾಗಿ ಪ್ರಸಿದ್ಧ ರಂಗ ನಟರಾದ ಹಾಗೂ ಕಂಪನಿ ಮಾಲೀಕರಾದ ಜಿ.ವಿ.ಕೃಷ್ಣ ಅವರನ್ನು ಮದುವೆಯಾದರು. ಇವರ ಮಕ್ಕಳಾದ ಶೃತಿ, ಶರಣ್ ಇಬ್ಬರೂ ಇಂದು ಚಲನಚಿತ್ರದಲ್ಲಿ ಹೆಸರಾಂತ ಕಲಾವಿದರಾಗಿದ್ದಾರೆ.

# ಹಾಸನ ಜಿಲ್ಲೆಯ ಪೌರಾಣಿಕ ರಂಗಭೂಮಿ

ಹಾಸನ ಜಿಲ್ಲೆಯಲ್ಲಿ ಒಂದು ಕಾಲಕ್ಕೆ ಮೂಡಲಪಾಯ ಯಕ್ಷಗಾನ ಪ್ರಚಲಿತವಾಗಿದ್ದಂತೆ ಕಾಣುತ್ತದೆ. ಕಾಲಾನಂತರದಲ್ಲಿ ಪಾರ್ಸಿರಂಗಭೂಮಿಯ ಪ್ರಭಾವದಿಂದ ಕಂಪನಿ ನಾಟಕಗಳು ಹುಟ್ಟಿಕೊಂಡ ಮೇಲೆ ಅವರು ಮೊದಲಿಗೆ ಪೌರಾಣಿಕ ನಾಟಕ ಅಭಿನಯಿಸಲು ಆರಂಭಿಸಿರಬೇಕು. ಈ ಪೌರಾಣಿಕ ನಾಟಕಗಳು ಕಂಪನಿ ನಾಟಕಗಳ ಮೂಲಕ ಹಳ್ಳಿಗಳಿಗೆ ಕಾಲಿರಿಸಿದವು. ಅಲ್ಲಲ್ಲಿ ಹುಟ್ಟಿಕೊಂಡ ನಾಟಕದ ಭಾಗವತರು (ಹಾರ್ಮೋನಿಯಂ ಮಾಸ್ಟರ್) ತಮ್ಮ ಪ್ರತಿಭೆಯನ್ನು ಶ್ರೀಮಂತಗೊಳಿಸಿಕೊಂಡು ಹಳ್ಳಿಗಳಲ್ಲಿ ಬೇಸಿಗೆ ಕಾಲದಲ್ಲಿ ನಾಟಕಗಳನ್ನು ನಿರ್ದೇಶಿಸಿದರು ಕಣಗಾಲ ಮುಗಿದ ನಂತರ ರೈತರಿಗೆ ಸಾಕಷ್ಟು ಬಿಡುವು ದೊರೆಯುತ್ತಿತ್ತು. ಈ ಸಂದರ್ಭಗಳಲ್ಲಿಯೇ ಹಳ್ಳಿಗಳಲ್ಲಿ ತಮ್ಮ ಗ್ರಾಮದೇವತೆಗಳ, ಕ್ಷೇತ್ರದೇವತೆಗಳ ಹಬ್ಬಗಳು ಆಚರಣೆಗೊಳ್ಳುತ್ತಿದ್ದವು. ಹಬ್ಬ ಆಚರಣೆಗೆ ಬರುವ ಸುತ್ತಲ ನಂಟರಿಗಾಗಿ ಚಿಕ್ಕ ಚಿಕ್ಕ ಮನೆಗಳಿಂದಾಗಿ ಅವರಿಗೆ ರಾತ್ರಿ ತಂಗಲು ಮನೆಗಳಲ್ಲಿ ವ್ಯವಸ್ಥೆ ಮಾಡುವುದು ಕೆಲವೇಳೆ ಕಷ್ಟವಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಹಳ್ಳಿಯಲ್ಲಿ ಅಲ್ಲಲ್ಲಿ ಕಲಾಸಂಘಗಳನ್ನು ಕಟ್ಟಿಕೊಂಡು ಎರಡು ಮೂರು ತಿಂಗಳು ಹಾರ್ಮೋನಿಯಂ ಮಾಸ್ಟರಿಂದ ಪೌರಾಣಿಕ ನಾಟಕ ಕಲಿತು ಸ್ಪ್ರಿಂಗ್ ಚಪ್ಪರದ ಸೀನರಿ ತಂದು ಹಳ್ಳಿಗಳಲ್ಲಿ ನಾಟಕ ಪ್ರದರ್ಶನ ಮಾಡುವುದು ಹಾಸನದ ಹಳ್ಳಿಗಳಲ್ಲಿ ಇಂದಿಗೂ ರೂಢಿಯಲ್ಲಿದೆ.

ಮೊದಲಿಗೆ ಹಳ್ಳಿಗರು ಒಂದೆಡೆ ಕಲೆತು ಯಾವ ನಾಟಕ ಕಲಿಯುವುದು ಭಾಗವತರನ್ನು ಯಾರನ್ನು ಕರೆಯುವುದೆಂದು ತೀರ್ಮಾನವಾಗುತ್ತದೆ. ಆನಂತರ ಹಾರ್ಮೋನಿಯಂ ಮಾಸ್ಟರನ್ನು ಇಂತಿಷ್ಟು ತಿಂಗಳಿಗೆ ಇಂತಿಷ್ಟು ಧವಸ ಹಾಗೂ ಇಂತಿಷ್ಟು ದುಡ್ಡು ಎಂದು ಒಪ್ಪಂದವಾಗುತ್ತದೆ. ಅದಕ್ಕೆ ಒಪ್ಪಿದ ಭಾಗವತರು ಹಳ್ಳಿಗೆ ಬಂದು ಮೊಕ್ಕಾಮ್ ಮಾಡುತ್ತಾರೆ. ಪ್ರತಿಯೊಬ್ಬ ಕಲಾವಿದರ ಮನೆಯಲ್ಲೂ ಇಂತಿಷ್ಟು ದಿವಸ ಅವರಿಗೆ ಊಟಕ್ಕೆ ವ್ಯವಸ್ಥೆಯಾಗುತ್ತದೆ. ಎಲ್ಲ ಕಲಾವಿದರಿಗೆ ಹಾರ್ಮೋನಿಯಂ ಮಾಸ್ಟರು ತಮ್ಮ ಲೆಗ್ ಹಾರ್ಮೋನಿಯಂ ಮುಂದೆ ನಿಲ್ಲಿಸಿ ಅವರಿಗೆ ಹಾಡುಗಾರಿಕೆ ಅಭ್ಯಾಸ ಮಾಡಿಸುತ್ತಲೇ ಅವರವರ ಯೋಗ್ಯತಾನುಸಾರ ಪಾತ್ರಗಳ ಹಂಚಿಕೆಯಾಗುತ್ತದೆ. ಅದರಂತೆ

ಪ್ರತಿರಾತ್ರಿ ತಾಲೀಮು ನಡೆಯುತ್ತದೆ. ಕಲಾ ತಂಡವು ಸ್ಥಿತಿವಂತ ತಂಡವಾಗಿದ್ದರೆ ಸ್ತ್ರೀಪಾತ್ರಕ್ಕೆ ನುರಿತ ಕಲಾವಿದೆಯರನ್ನು ಸಂಭಾವನೆ ಮೇಲೆ ಗೊತ್ತು ಮಾಡುತ್ತಾರೆ. ಆ ಕಲಾವಿದೆಯರು ನಾಟಕದ ಹದಿನೈದು ದಿನ ಮೊದಲು ಒಂದು ದಿನ ಹಾಗೂ ನಾಟಕದ ದಿನ ಬಂದು ಸಂಬಂಧಪಟ್ಟ ಪಾತ್ರ ಅಭಿನಯಿಸಿ ಜನ ಮೆಚ್ಚಿಗೆ ಪಡೆಯುತ್ತಾರೆ. ವಾದ್ಯವೃಂದವೂ ಭಾಗವತನ ಅಪೇಕ್ಷೆ ಹಾಗೂ ಹೊಂದಾಣಿಕೆಗೆ ತಕ್ಕಂತೆ ಒಪ್ಪಂದವಾಗಿ ಅವರೂ ನಾಟಕದ ದಿನ ಬಂದು ತಮ್ಮ ಪರಿಣತಿಯಿಂದ ಜನಮೆಚ್ಚಿಗೆಗೆ ದಿನ ಬಂದು ತಮ್ಮ ಅದ್ಭುತವಾದ ವಿದ್ಯುದೀಪಗಳಿಂದ ಅಲಂಕೃತವಾದ ಸ್ಪ್ರಿಂಗ್ ಚಪ್ಪರದಲ್ಲಿ ತಮ್ಮ ಡ್ರಾಮಾಸೀನರಿಗಳನ್ನು ಸಜ್ಜುಗೊಳಿಸಿ, ಪಾತ್ರಧಾರಿಗಳ ವೇಷಭೂಷಣಗಳನ್ನು ಮಾಡಿ ನಾಟಕದ ಪ್ರದರ್ಶನಕ್ಕೆ ಸಹಕಾರಿಯಾಗಿ ನಿಲ್ಲುತ್ತಾರೆ.

ಹಾಸನದ ಹಳ್ಳಿಗಳಲ್ಲಿ ಇಂತಹ ಪೌರಾಣಿಕ ನಾಟಕಗಳನ್ನು ಅಭಿನಯಿಸದ ಹಳ್ಳಿ ಇಲ್ಲವೇ ಇಲ್ಲ ಎಂದು ಹೇಳಬಹುದು. ಪ್ರತಿ ಹಳ್ಳಿಯೂ ಯಾವುದಾದರೂ ಒಂದು ಸಂದರ್ಭದಲ್ಲಿ ತಮ್ಮೂರ ಜಾತ್ರೆ, ಹಬ್ಬ, ಉತ್ಸವಗಳ ನಿಮಿತ್ತ ಈ ಬಗೆಯ ಪೌರಾಣಿಕ ನಾಟಕಗಳ ವ್ಯವಸ್ಥೆ ಮಾಡುತ್ತಾರೆ.

ಇಂತಹ ಪೌರಾಣಿಕ ನಾಟಕಗಳನ್ನು ಹಳ್ಳಿಗಳಲ್ಲಿ ಕಲಿಸುವ ಭಾಗವತರ ದಂಡೇ ಹಾಸನ ಜಿಲ್ಲೆಯಲ್ಲಿ ಇದೆ.

ಹಾಸನ ತಾಲ್ಲೂಕಿನಲ್ಲಿ ಡಾ.ರಂಗಪ್ಪದಾಸ್, ಗುಂಡೂರಾಜ್, ವಿರೂಪಾಕ್ಷಪ್ಪ, ಅದ್ದೇರಹಳ್ಳಿ ವೀರಪ್ಪ, ಪಾಲಾಕ್ಷಚಾರ್, ಶ್ರೀನಿವಾಸಮೂರ್ತಿ, ರಂಗಾಚಾರ್, ಮಲ್ಲಿಕಾಶಕುನಯ್ಯ, ಎ.ಸಿ.ರಾಜು, ಮಂಚೇಗೌಡ, ಕಾಂತರಾಜು, ಪ|| ಸಿದ್ದಪ್ಪ, ಮಲ್ಲಿಕಾರ್ಜುನ, ಲಕ್ಷೇಗೌಡ, ಯಾಲಕ್ಕಿಗೌಡ, ಜೈರಾಜ್, ಬಿ.ಸಿ.ಯಶೋದನಾಯ್ಕ, ರಾಮಾಚಾರ್, ದೇವರಾಜು, ಕಪ್ಪಣ್ಣ, ರಾಮಾಚಾರ್, ದೇವರಾಜು, ಬಸವಾಚಾರ್, ಪಪ್ಪಗೌಡ, ಕರಿಯಪ್ಪ ಮುಂತಾದವರಲ್ಲಿ ಹೆಸರಿಸಬಹುದು.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಚೌಡಪ್ಪದಾಸ್, ದ್ಯಾವೇನಹಳ್ಳಿ ಅವರಲ್ಲದೆ ಬಿ.ಎಸ್.ನಾಗರಾಜ್, ಕಪನಿಗೌಡ, ರವೀಂದ್ರ, ಪ್ರಕಾಶ್, ರಾಜೇಶ್, ವೆಂಕಟಸುಬ್ಬಯ್ಯ, ಸಚಿನ್, ಚೆನ್ನಕೇಶವಮೂರ್ತಿ, ಟಿ.ಸಿ.ರಂಗಯ್ಯ, ಪುಟ್ಟಣ್ಣಯ್ಯ, ವೆಂಕಟಾಚಾರ್ಯ, ಗಣೇಶಗೌಡ, ಟಿ.ಎನ್.ಕೆಂಪೇಗೌಡ, ಕೆ.ಎನ್.ಸೊಂಬೇಗೌಡ, ಪ್ರಕಾಶ್ ಮುಖ್ಯರು.

ಬೇಲೂರು ತಾಲ್ಲೂಕು ಭಾಗವತರಲ್ಲಿ ಪಾಂಡುರಂಗಚಾರ್, ಪುಟ್ಟೇಗೌಡ, ಎ.ಎಮ್.ಕೆಂಚೇಗೌಡ ಅಗ್ಗಡಲು, ಜಾನೇಗೌಡ, ಲಿಂಗರಾಜಾಚಾರ್, ಗಂಗಾಧರಪ್ಪ ಈರನಾಯ್ಕ, ಪಾಪಣ್ಣ ಶೆಟ್ಟಿಗೆರೆ, ಶಾಂತಪ್ಪ ಹಿಡಿ, ಗೋವಿಂದೇಗೌಡ ಮುಖ್ಯರು.



ಹೊಳೆನರಸೀಪುರದಲ್ಲಿನ ಭಾಗವತರಲ್ಲಿ ವೀರಪ್ಪ, ಸೀತಾರಾಮೇಗೌಡ, ಹೆಚ್.ಇ.ಶಿವಾನಂದ, ಕೆ.ಹಿರಣ್ಣಯ್ಯ, ಈ ರಂಗೇಗೌಡ, ಜವರಾಯಿ ಹೆಚ್.ಸಿ., ಜೆ.ಸಿ.ನರಸಿಂಹಾಚಾರ್, ನಾರಾಯಣಸ್ವಾಮಿ, ಬೊಮ್ಮರಾಯಿ, ಈರಯ್ಯ, ಮಲ್ಲೇಶ, ಚಿಕ್ಕರಾಜು, ರೇವಣ್ಣ ಹೆಚ್.ವಿ., ಹೊನ್ನೇಗೌಡ ಎನ್.ಪಿ., ಚಂದ್ರಶೇಖರ್ ಸಿ.ಬಿ., ರಂಗಯ್ಯ, ಕೆ.ಲಿಂಗಪ್ಪ, ಪಾಪೇಗೌಡ, ತಿಮ್ಮಯ್ಯ, ಈರಯ್ಯ, ಬಿ.ಆರ್.ಕೃಷ್ಣಮೂರ್ತಿ ಮುಂತಾದವರನ್ನು ಹೆಸರಿಸಬಹುದು.

ಆಲೂರು ತಾಲ್ಲೂಕಿನಲ್ಲೂ ಪೌರಾಣಿಕ ರಂಗಭೂಮಿ ಪ್ರಚಲಿತವಿದ್ದು ಅಲ್ಲಿನ ಹಾರ್ಮೋನಿಯಂ ಮೇಸ್ಟ್ರಲ್ಲಿ ಚಂದ್ರಚಾರ್, ತಿಮ್ಮಾಚಾರ್, ತಿಮ್ಮಯ್ಯ, ಎಂ.ಆರ್.ರಂಗಯ್ಯ, ಕರಿಯಯ್ಯ, ಸ್ವಾಮಿಗೌಡ, ವೆಂಕಟರಾಮ್, ರಂಗಪ್ಪ ಅಣ್ಣಪ್ಪ, ಚಂದ್ರಪ್ಪ, ಕಾಂತರಾಜ, ನಾಗಾರಾಜಾಚಾರ್ ಮುಖ್ಯರು. *

ಅರಕಲಗೂಡು ತಾಲ್ಲೂಕು ಪೌರಾಣಿಕ ರಂಗಭೂಮಿಯಲ್ಲಿ ತನ್ನ ಛಾಪು ಮೂಡಿಸಿದ್ದು, ಅಲ್ಲಿನ ಭಾಗವತರುಗಳಾದ ಚೆನ್ನಕೇಶವಯ್ಯ, ರಾಮಕೃಷ್ಣಯ್ಯ, ಡಿ.ಬಿ.ಬಸವರಾಜು, ಸಿ.ಬಿ.ಸ್ವಾಮಿ, ಎಂ.ಟಿ.ರಂಗಯ್ಯ, ಲಕ್ಷ್ಮಣ, ಎನ್.ಎಂ.ಸಣೇಗೌಡ, ಡಿ.ಎಸ್.ಹೊನ್ನೇಗೌಡ, ಕುಬೇರಯ್ಯ, ಧರ್ಮಗೌಡ, ಸಣ್ಣಸ್ವಾಮಿಗೌಡ, ಮಲ್ಲೇಶ್, ಎಂ.ಪಿ.ಪದ್ಮರಾಜು, ವೀರಭದ್ರಾಚಾರ್, ಕೃಷ್ಣಗೌಡ, ಈ.ಕೆ.ನಾಗೇಂದ್ರಕುಮಾರ್, ದ್ಯಾಸಪ್ಪಗೌಡ, ತಿಮ್ಮೇಗೌಡ, ಶಿವಣ್ಣ, ಅಪ್ಪಾಜಿಗೌಡರ ಹೆಸರುಗಳು ಕಂಡುಬರುತ್ತವೆ.

ಸಕಲೇಶ ಪುರ ತಾಲ್ಲೂಕಿನಲ್ಲಿ ಹವ್ಯಾಸಿ ರಂಗ ಚಟುವಟಿಕೆಗಳು ಪ್ರಧಾನವಾಗಿರುವುದರಿಂದ ಪೌರಾಣಿಕ ರಂಗಭೂಮಿ ಅಷ್ಟಾಗಿ ಕಂಡುಬರುವುದಿಲ್ಲ. ಹೆಚ್.ಈ.ಪುಟ್ಟಯ್ಯ ಅವರ ಹೆಸರು ಮಾತ್ರ ಕಂಡುಬರುತ್ತದೆ.

ಹಾಸನ ಜಿಲ್ಲೆಯಲ್ಲಿ ಭಾಗವತರಿಗೆ ಸಾಥಿಯಾಗಿ ನಾಟಕಗಳಲ್ಲಿ ತಬಲ ವಾದಕರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರು ತಾಲೀಮಿನಲ್ಲಿ ಒಂದು ದಿನ ಹಾಗೂ ನಾಟಕ ಪ್ರದರ್ಶನದ ದಿನದಂದು ಇಂತಿಷ್ಟು ಹಣ ಎಂದು ಒಪ್ಪಂದದ ಮೇರೆಗೆ ತಬಲ ನುಡಿಸಲು ಹೋಗುತ್ತಾರೆ. ಹಾಸನದ ಕೃಷ್ಣಮೂರ್ತಿ ತುಳಸೀರಾವ್, ವೆಂಕಟೇಶ್, ಪುಟ್ಟಪ್ಪ, ಚನ್ನರಾಯಪಟ್ಟಣದ ಸಿ.ಎಂ.ನಂಜಪ್ಪ, ಗೋವಿಂದಪ್ಪ, ಬೇಲೂರಿನ ರಂಗಸ್ವಾಮಿ, ನಾಗೇಶ್, ಸೂರಪ್ಪಗೌಡ, ಪುಟ್ಟಣ್ಣ, ಮೂಡ್ಲಿಗಿರಿ, ಯೋಗೀಶ್, ಹೊಳೆನರಸೀಪುರದ ಸಣ್ಣಸ್ವಾಮಿ,

ಹೆಚ್.ಪಿ.ಶಿವಣ್ಣ, ತ್ರಿಮೂರ್ತಿ, ಕೆ.ಎನ್.ನಾಗರಾಜು, ಆಲೂರಿನ ರಂಗಸ್ವಾಮಿ, ಪುಟ್ಟರಾಜು, ರಾಜು, ಅರಕಲಗೂಡಿನ ರಾಜಣ್ಣ, ಗೋಪಾಲ ಮುಂತಾದವರು ಪ್ರಸಿದ್ಧಿ ಹೊಂದಿದ್ದಾರೆ.



ಹಾಗೆಯೇ ರಂಗಸಂಗೀತದ ಕ್ಲಾರಿಯೊನೆಟ್ ವಾದನದಲ್ಲಿ ಹಾಸನದ ಶಾಮಣ್ಣ, ಚನ್ನರಾಯಪಟ್ಟಣದ ಕುಮಾರ್, ಬಿ.ವಿ.ಕುಮಾರ್, ಸಣ್ಣಪ್ಪ ಇವರು ಮುಖ್ಯರಾಗಿ ಕಾಣಿಸುತ್ತಾರೆ.

ಇವರೇ ಅಲ್ಲದೆ ಹಾಸನದ ಹಳ್ಳಿ ಹಳ್ಳಿಗಳಲ್ಲಿ ಪೌರಾಣಿಕ ರಂಗಭೂಮಿಯನ್ನು ಜೀವಂತಗೊಳಿಸಿರುವ ಪೌರಾಣಿಕ ರಂಗಭೂಮಿಯ ಸಾವಿರಾರು ಕಲಾವಿದರನ್ನು ಕಾಣಬಹುದು. ಈ ಕಲಾವಿದರು ತಮ್ಮ ತಮ್ಮ ಪಾತ್ರಗಳಲ್ಲಿ ಪರಿಣತಿ ಹೊಂದಿ ಅನೇಕ ಬಾರಿ ಪಾತ್ರಗಳನ್ನು ಹೃದಯತುಂಬಿ ಅಭಿನಯಿಸಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಹೆಚ್ಚಾಗಿ ಅಭಿನಯಿಸುವ ಪೌರಾಣಿಕ ನಾಟಕ 'ಕುರುಕ್ಷೇತ್ರ'. ಇದೇ ನಾಟಕವನ್ನು ಹಳ್ಳಿಹಳ್ಳಿಗಳಲ್ಲಿ ಹೆಚ್ಚಾಗಿ ಅಭಿನಯಿಸಲು ಕಾರಣ ನಾಟಕಕ್ಕೆ ಸೇರಿದ ಎಲ್ಲ ಕಲಾವಿದರಿಗೂ ಸಮಾನ ಪಾತ್ರ ಹಂಚಿಕೆಯಾಗುವುದು. ಹಾಗೂ ಈ ನಾಟಕ ಅಭಿನಯದ ದಿನ ಸ್ತ್ರೀಪಾತ್ರ ಅಭಿನಯಿಸುವ ನುರಿತ ಕಲಾವಿದರೆಯರು ಸುಲಭವಾಗಿ ದೊರಕುವುದು ಹಾಗೂ ಎಲ್ಲ ಡ್ರಾಮಾ ಸೀನರಿಯವರೂ 'ಕುರುಕ್ಷೇತ್ರ' ನಾಟಕಕ್ಕೆ ಬೇಕಾದ ಸೀನರಿ, ವೇಷಭೂಷಣಗಳನ್ನು ವಿಶೇಷ ರೀತಿಯಲ್ಲಿ ಇಟ್ಟಿರುವುದು ಹಾಗೂ ನಾಟಕ ಇಡೀ ರಾತ್ರಿ ಸುದೀರ್ಘವಾಗಿ ಬೆಳಗಿನವರೆಗೆ ಅಭಿನಯಿಸಲು ಸಮಯಾವಕಾಶ ಇರುವುದು ಇಂಥ ಹತ್ತು ಹಲವು ಕಾರಣಗಳಿಗಾಗಿ 'ಕುರುಕ್ಷೇತ್ರ' ನಾಟಕವನ್ನೇ ಹೆಚ್ಚಾಗಿ ಆಯ್ಕೆ ಮಾಡುತ್ತಾರೆ. ಕುರುಕ್ಷೇತ್ರವೇ ಅಲ್ಲದೆ 'ರಾಮಾಯಣ' "ತಿಪುರ ಸಂಹಾರ', 'ಭಕ್ತಪ್ರಹ್ಲಾದ', 'ಸತ್ಯವ್ರತ', 'ಶನಿಮಹಾತ್ಮ', 'ಪಾಂಡುವಿಜಯ', 'ದೇವಿ ಮಹಾತ್ಮ', 'ಶಿವ-ಜಲಂಧರ' ಇನ್ನು ಮುಂತಾದ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಾರೆ. ಕೆಲಸಂದರ್ಭದಲ್ಲಿ ಈ ಕಲಾವಿದರು ಐತಿಹಾಸಿಕ ಹಾಗೂ ಗ್ರಾಮೀಣ ಭಾಗದಲ್ಲಿ ಕಂಪನಿ ನಾಟಕದ ಮಾದರಿಯ ಸಾಮಾಜಿಕ ನಾಟಕ ಅಭಿನಯಿಸುವುದೂ ಉಂಟು.

ಪೌರಾಣಿಕ ನಾಟಕಗಳಿಗೆ ಸೀನರಿ, ಚಪ್ಪರ, ಡ್ರೆಸ್, ಡೈನಮೋ, ಮೇಕಪ್ ಇತ್ಯಾದಿ ವಿಚಾರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ಡ್ರಾಮಾ ಸೀನರಿ ಕಂಪನಿಗಳು ಹಾಸನ ಜಿಲ್ಲೆಯಲ್ಲಿವೆ. ಕೆಲವೇಳೆ ಜನರಿಗೆ ಇನ್ನು ಹೆಚ್ಚಿನ ಆಸಕ್ತಿ ಮೂಡಿಸುವುದಕ್ಕಾಗಿ ಹೊರ ಜಿಲ್ಲೆಗಳಿಂದಲೂ ಡ್ರಾಮಾಸೀನರಿ ತರಿಸಿ ನಾಟಕಾಭಿನಯ ಮಾಡುವುದೂ ಉಂಟು.

# ಕರ್ನಾಟಕ ರಂಗಸಂಗೀತ ಪರಿಷತ್ ಹಾಗೂ ಹಾಸನ ಜಿಲ್ಲೆಯ ಸಂಬಂಧ

ಈ ಪರಿಷತ್‌ಗೆ ಅಧ್ಯಕ್ಷರಾಗಿ ದುಡಿಯುತ್ತಿರುವ ಗೋವಿಂದಗೌಡರು ಹಾಸನ ಜಿಲ್ಲೆಯವರು. ರಂಗ ಸಂಗೀತ ಪರಿಷತ್ ಪೌರಾಣಿಕ ರಂಗಭೂಮಿ ಉಳಿವಿಗಾಗಿ ಶ್ರಮಿಸುತ್ತಿರುವ ಸಂಸ್ಥೆ, ಶ್ರೇಷ್ಠ ರಂಗಸಾಹಿತ್ಯ, ರಂಗಸಂಗೀತವನ್ನು ಉಳಿಸಿ ಬೆಳೆಸಬೇಕೆಂಬುದು ಇದರ ಗುರಿ. ಕಲಾವಿದರ ಒಳಿತಿಗಾಗಿ ಶ್ರಮಿಸುತ್ತಿದೆ. ಈಗಾಗಲೇ ಬೆಂಗಳೂರು, ತುಮಕೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಐದು ಸಮ್ಮೇಳನಗಳನ್ನು ನಡೆಸಿದೆ.

ತನ್ನ ವೈಭವವನ್ನು ಕಳೆದುಕೊಳ್ಳುತ್ತಿರುವ ಪೌರಾಣಿಕ ರಂಗಭೂಮಿಗೆ ಹೊಸ ಮೆರುಗನ್ನು ತಂದು ಜನಪ್ರಿಯಗೊಳಿಸಬೇಕೆಂಬುದು ಇದರ ಗುರಿ. ಟಿ.ವಿ. ಮಾಧ್ಯಮದ ಪ್ರಭಾವದಿಂದ ನಮ್ಮ ಗ್ರಾಮೀಣ ರಂಗಭೂಮಿ ಹಿಂದೆ ಸರಿಯುತ್ತಿದೆ. ಪೌರಾಣಿಕ ರಂಗಭೂಮಿಯ ಜೀವಾಳವಾಗಿರುವ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಿಂದ ರೂಪು ಪಡೆದಿರುವ 'ರಂಗಸಂಗೀತ ಪರಂಪರೆಯನ್ನು ಜೀವಂತಗೊಳಿಸುವುದಲ್ಲದೆ, ಅದನ್ನು ಇನ್ನಷ್ಟು ಸೃಜನ ಶೀಲಗೊಳಿಸುವುದು ಇದರ ಉದ್ದೇಶ. ಈಗಾಗಲೇ ಈ ದಿಸೆಯಲ್ಲಿ ಈ ಪರಿಷತ್ತು ಸಾಕಷ್ಟು ಕೆಲಸ ಮಾಡಿದೆ.

ಪೌರಾಣಿಕ ರಂಗಭೂಮಿಯ ಕಲಾವಿದರನ್ನೆಲ್ಲ ಒಂದೇ ಸೂರಿನಡಿ ಸಂಘಟಿಸಿ ಪೌರಾಣಿಕ ರಂಗಭೂಮಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ರಾಜ್ಯದ ವಿವಿಧ ಜಿಲ್ಲಾ, ತಾಲ್ಲೂಕುಗಳಲ್ಲಿ ತನ್ನ ಶಾಖೆಗಳನ್ನು ತೆರೆದು ಕಾರ್ಯಕಾರಿ ಮಂಡಳಿಯನ್ನು ರಚಿಸಿದೆ. ಅದರಂತೆ ಹಾಸನ ಜಿಲ್ಲೆಯಲ್ಲೂ ಗರಿಗೆದರಿರುವ ಈ ಸಂಘಟನೆಗೆ ಜಿಲ್ಲಾಮಟ್ಟದ ಹಾಗೂ ತಾಲ್ಲೂಕುಮಟ್ಟದ ಸಮಿತಿಗಳನ್ನು ರಚಿಸಿಕೊಂಡು ೨೨, ೨೩ರ ೧೨ನೇ ತಿಂಗಳ ೨೦೧೨ನೇ ಇಸವಿಯಲ್ಲಿ ಹಾಸನ ನಗರದಲ್ಲಿ ಐದನೇ ರಂಗಸಂಗೀತ ಸಮ್ಮೇಳನ ನಡೆಸಿತು.

ಈ ರಾಜ್ಯಮಟ್ಟದ ಸಮ್ಮೇಳನಕ್ಕೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಬಾಗೂರು ಹೋಬಳಿಯ ಚೌಡಪ್ಪದಾಸ್ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಸಮ್ಮೇಳನವನ್ನು, ಅತ್ಯಂತ ವಿಜೃಂಭಣೆಯಿಂದ ಮಾಡುವುದರ ಮೂಲಕ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿತು.

ಈ ಸಮ್ಮೇಳನಾಧ್ಯಕ್ಷರಾದ ಚೌಡಪ್ಪದಾಸರು ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿದವರು. ಇವರು ಮೂರನೇ ವಯಸ್ಸಿನಲ್ಲೇ ಮಾತಾಪಿತೃ ವಿಯೋಗಕ್ಕೆ ಒಳಗಾಗಿ ಸೋದರತ್ತೆ ನಿಂಗಾಜಮ್ಮನವರ ಆಶ್ರಯದಲ್ಲಿ ಬೆಳೆದರು. ಕೂಲಿಮಠದಲ್ಲಿ ಶಿಕ್ಷಣ ಪಡೆದರು. ಅಲ್ಲಿಯೇ ರಾಮಾಯಣ, ಮಹಾಭಾರತ, ಅಮರಕೋಶ, ಹರಿಭಕ್ತಸಾರವನ್ನೆಲ್ಲ ಕಲಿತು ಪ್ರವೀಣರಾದರು. ನಾಟಕದ ಪ್ರಾಕ್ಟೀಸ್ ಮನೆಗೆ ಹೋಗಿ ಸಾಕಷ್ಟು ಕಲಿತರು. ಕೇಸರಿ ಗಿಡ್ಡಪ್ಪದಾಸ್, ಭದ್ರಗಿರಿ ಅಚ್ಯುತದಾಸ್, ಗುರುರಾಜುಲು ನಾಯ್ಡು ಇವರಿಂದ ಕೀರ್ತನೆ ಹಾಡುವ ಪ್ರೇರಣೆ ಪಡೆದರು. ಅರಸಪ್ಪನವರಲ್ಲಿ ಸಂಗೀತಾಭ್ಯಾಸ ಮಾಡಿದರು. ಪೌರಾಣಿಕ ನಾಟಕಗಳಲ್ಲಿ ಸ್ತ್ರೀಪಾತ್ರ, ಪುರುಷ ಪಾತ್ರಗಳನ್ನು ಸಮರ್ಥವಾಗಿ ಅಭಿನಯಿಸಿದರು. ಆನಂತರ ಕೀರ್ತನಕಾರರಾಗಿಯೂ, ಪೌರಾಣಿಕ ನಾಟಕ ಕಲಿಸುವ ನಿರ್ದೇಶಕರಾಗಿಯೂ ಹೆಸರು ಮಾಡಿದರು. ಇವರು ಐವತ್ತಕ್ಕೂ ಮಿಗಿಲಾಗಿ ಪೌರಾಣಿಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸ್ವತಃ ರಂಗಸಂಗೀತ ರಚಿಸಿದ್ದಾರೆ.

## ರಂಗಸಂಗೀತ ಪರಿಷತ್ ಮತ್ತು ಹೆಚ್.ಎಸ್.ಗೋವಿಂದಗೌಡರು

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಹನ್ಯಾಳು ಗ್ರಾಮ ಇವರ ಹುಟ್ಟೂರು. ೧೯೪೭ರಲ್ಲಿ ಸಣ್ಣೇಗೌಡ - ಹನುಮಮ್ಮ ದಂಪತಿಗಳ ಹಿರಿಯ ಮಗನಾಗಿ ಜನನ. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ, ರುದ್ರಪಟ್ಟಣದಲ್ಲಿ ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ, ಮೈಸೂರಿನ ಯುವರಾಜ ಕಾಲೇಜಿನಲ್ಲಿ ಡಿಗ್ರಿ ಪದವಿ, ಮಾನಸ ಗಂಗೋತ್ರಿಯಲ್ಲಿ ಎಂ.ಎಸ್ಸಿ. ಪದವಿ (೧೯೭೨ರಲ್ಲಿ)

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ತೆರಿಗೆ ಅಧಿಕಾರಿಯಾಗಿ ಸೇರಿ, ಉಪ ಆಯುಕ್ತರಾಗಿ ೨೦೦೫ರಲ್ಲಿ ನಿವೃತ್ತಿಯಾದವರು ಪ್ರೌಢಶಾಲೆಯಲ್ಲಿ ಓದುವಾಗ ಚಿಕ್ಕಪ್ಪಂದಿರ ಕಲಾಮಾರ್ಗದರ್ಶನದಲ್ಲಿ ನಾಟಕ ಕಲೆಯ ಬಗ್ಗೆ ಆಸಕ್ತಿ ಹೊಂದಿ, ಪೌರಾಣಿಕ ನಾಟಕಗಳಲ್ಲಿ ಭರತ, ರಾಮ, ಕರ್ಣನ ಪಾತ್ರಗಳ ಅಭಿನಯ. ಈಗಲೂ ರಾಮಾಯಣ ನಾಟಕದ ರಾವಣನ ಪಾತ್ರ ಅಭಿನಯಿಸುತ್ತಾರೆ.

೨೦೦೨ರಲ್ಲಿ ಬೆಂಗಳೂರಿನಲ್ಲಿ 'ರಂಗರತ್ನಾಕರ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರ ಕಾರ್ಯದರ್ಶಿಯಾಗಿ ಕರ್ನಾಟಕದಲ್ಲಿ ಇದುವರೆವಿಗೂ ಯಾರೂ ಕಲ್ಪನೆ



ಮಾಡದಿರುವ ರಸ್ತೆ ರಂಗಗೀತಾ' ಕಾರ್ಯಕ್ರಮಗಳನ್ನು ಹಾಸನ, ಶಿವಮೊಗ್ಗ, ಮೈಸೂರು, ತುಮಕೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನೆರವೇರಿಸಿರುತ್ತಾರೆ. ರಂಗಗೀತೆಗಳ "ಅಕ್ಷರಮಾಲಾ' ಕಾರ್ಯಕ್ರಮಗಳನ್ನು ಮತ್ತು ರಂಗದೃಶ್ಯಾವಳಿ ಕಾರ್ಯಕ್ರಮಗಳನ್ನು ಅನೇಕ ಕಡೆಗಳಲ್ಲಿ ಮಾಡಿರುತ್ತಾರೆ.

**ಸಂಪಾದನೆ**

೧. ರಂಗಗೀತೆಗಳು (ಪೌರಾಣಿಕ), ೨. ಕನ್ನಡ ಕಾವ್ಯಗಳ ಗೆಜ್ಜೆನಾದ (ಎರಡು ಸಂಪುಟಗಳು) ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿರವರ ಜೊತೆಯಲ್ಲಿ), ೩. ರಂಗಗೀತೆಗಳು ಭಾಗ-೧, ೨ ಮತ್ತು ೩ ಆರ್.ಪರಮಶಿವನ್‌ರವರ ಜೊತೆಯಲ್ಲಿ, ೪. ನಾಟಕಗಳಾದ 'ಬೇಡರ ಕಣ್ಣಪ್ಪ, ಸುಭದ್ರಾಕಲ್ಯಾಣ, ರಾಮಾಂಜನೇಯ ಯುದ್ಧ, ಭೀಷ್ಮ ಪ್ರತಿಜ್ಞೆ ಮಹಾಕವಿ ಕಾಳಿದಾಸ, ದಾನಶೂರ ಕರ್ಣ (ಪರಿಷ್ಕೃತ); ಭಕ್ತ ಅಂಬರೀಷ, ರಾಜಾವಿಕ್ರಮ ನಾಟಕಗಳು (ಕನ್ನಡ ಪ್ರಾಧಿಕಾರಕ್ಕೆ ಸಂಪಾದನೆ) ಮತ್ತು ೫. ಶ್ರೀ ಪರಮಶಿವನ್ ರವರ ಬಗ್ಗೆ 'ರಂಗಗೀತಾ ರತ್ನ' ಸಂಭಾವನಾ ಗ್ರಂಥ (ಪ್ರೊ.ಎ.ವಿ.ಸೂರ್ಯನಾರಾಯಣಸ್ವಾಮಿ ಮತ್ತು ಡಾ.ಹೆಚ್.ಕೆ.ರಾಮನಾಥ್‌ರವರ ಜೊತೆ), ೬. ರಂಗಸ್ಮರಣೆ ಹಾಗೂ ರಂಗಸಿರಿ ಸ್ಮರಣ ಸಂಚಿಕೆಗಳು (ಹಾಸನ ಮತ್ತು ಮೈಸೂರು ಜಿಲ್ಲಾ ರಂಗಸಂಗೀತ ಪರಿಷತ್ತಿನ ಸಮ್ಮೇಳನದ ಸವಿನೆನಪಿಗಾಗಿ).

೧. ರಂಗಗೀತೆಗಳ ೧೫ ಧ್ವನಿಸುರುಳಿ (೬೦೦ ಹಾಡುಗಳು), ೨. ರಂಗಗೀತೆಗಳ ೧೨ ಸಿಡಿ (೧೦೦೦ ಹಾಡುಗಳು-ಶ್ರೀ ಆರ್.ಪರಮಶಿವನ್ ರವರ ಸಾರಥ್ಯದಲ್ಲಿ) ಮತ್ತು ೩. ರಂಗಗಂಧರ್ವಗಾನ ಸಿಡಿ (ಗ್ರಾಮಫೋನ್ ತಟ್ಟೆಗಳಲ್ಲಿನ ವೃತ್ತಿ ರಂಗಭೂಮಿಯಲ್ಲಿನ ರಂಗದಿಗ್ಗಜರ ಹಾಡುಗಳು) |

ಇದಲ್ಲದೆ, ಹೆಚ್.ಎಸ್.ಗೋವಿಂದಗೌಡರು ಕರ್ನಾಟಕ ರಂಗಸಂಗೀತ ಪರಿಷತ್ ಬೆಂಗಳೂರು ಇದರ ಅಧ್ಯಕ್ಷರಾಗಿ, ಬೆಂಗಳೂರು, ತುಮಕೂರು, ಮಂಡ್ಯ, ಹಾಸನ ಹಾಗೂ ಮೈಸೂರು ಜಿಲ್ಲೆಗಳಲ್ಲಿ ೬ ರಂಗಸಂಗೀತ ಪರಿಷತ್ತಿನ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿರುತ್ತಾರೆ.

# ಚಿತ್ರಾವಳಿ




"ಚಂದ್ರು ಕಾಳೇನಹಳ್ಳಿ ನಾಟಕ ಸಾಹಿತ್ಯ" ವಿಚಾರ ಸಂಕಿರಣದಲ್ಲಿ ರಂಗಾರೆಡ್ಡಿ, ಬಸವಲಿಂಗಯ್ಯ, ಕಿ.ರಂ. ಮರುಳಸಿದ್ದಪ್ಪ, ರಮೇಶ್, ಕಪ್ಪಣ್ಣ, ವನಂ, ಚಂದ್ರು ಇದ್ದಾರೆ




ಚನ್ನರಾಯಪಟ್ಟಣದ ಜನಪದ ರಂಗಮಾಧ್ಯಮ ಪ್ರದರ್ಶಿಸಿದ ಕಾಳೇನಹಳ್ಳಿಯವರ ಮಾಯಾಕಿನ್ನರಿ ನಾಟಕದ ದೃಶ್ಯ.
ನಿ: ಬಸವಲಿಂಗಯ್ಯ




ಗಿನ್ನಿಸ್ ದಾಖಲೆಗಾಗಿ ಚನ್ನರಾಯಪಟ್ಟಣದ ನಿರಂತರ ಕಲಾ ತಂಡ
ಪ್ರದರ್ಶಿಸಿದ "ಸ್ಫೋಟ" ನಾಟಕದ ದೃಶ್ಯ. ನಿ: ನಂಜುಡ ಮೈಮ್





ಲಿಮ್ಕಾ ದಾಖಲೆಗಾಗಿ ಚನ್ನರಾಯಪಟ್ಟಣ ಗುರುಜ್ಯೋತಿ ಕಲಾಸಂಗಮ
ಮರದ ಮೇಲೆ ಪ್ರದರ್ಶಿಸಿದ "ನೆಲೆ" ನಾಟಕದ ದೃಶ್ಯ. ನಿ: ನಾಗರಾಜ ಕೋಟೆ



ಚನ್ನರಾಯಪಟ್ಟಣದ ದೇವನಾಗೇಶ್ ತಂಡದ "ಕಾಲಜ್ಞಾನಿ ಕನಕ"
ನಾಟಕದ ದೃಶ್ಯ.



ಹಾಸನ ಅನಿಕೇತನ ಟ್ರಸ್ಟ್ ಪ್ರದರ್ಶಿಸಿದ ತೇಜಸ್ವಿಯವರ "ಕಿರಗೂರಿನ
ಗಯ್ಯಾಳಿಗಳು". ನಿ: ಸಣ್ಣೇಗೌಡ



ಹಾಸನದ ಕಲಾಸಿರಿ ತಂಡದ "ಗಾಂಧೀ ವಿರುದ್ಧ ಗಾಂಧೀ" (ಅನುವಾದ ಡಿ.ಎಸ್. ಚೌಗುಲೆ, ನಿ: ಜಯಶಂಕರ ಬೆಳಗುಂಬ)



ಕರ್ನಾಟಕ ರಂಗಸಂಗೀತ ಪರಿಷತ್ತು ಹಾಸನದಲ್ಲಿ ನಡೆಸಿದ ಸಮ್ಮೇಳನದ ಅಧ್ಯಕ್ಷ ದ್ಯಾವೇನಹಳ್ಳಿ ಚೌಡಪ್ಪದಾಸ್ ಅವರನ್ನು ದೇಜಗೌ, ಮಳಲಿ ಮತ್ತಿತರರು ಸನ್ಮಾನಿಸಿದರು




ಕರ್ನಾಟಕ ರಂಗಸಂಗೀತ ಪರಿಷತ್ತು ಅರಕಲಗೂಡು ತಾ. ಶಾಖೆಯ ಪದಾಧಿಕಾರಿಗಳು



ಕರ್ನಾಟಕ ರಂಗಸಂಗೀತ ಪರಿಷತ್ತು ಚನ್ನರಾಯಪಟ್ಟಣ ತಾ. ಶಾಖೆಯ ಪದಾಧಿಕಾರಿಗಳು



ಕರ್ನಾಟಕ ರಂಗಸಂಗೀತ ಪರಿಷತ್ತು ಬೇಲೂರು ತಾ. ಶಾಖೆಯ ಪದಾಧಿಕಾರಿಗಳು



ಕರ್ನಾಟಕ ರಂಗಸಂಗೀತ ಪರಿಷತ್ತು ಹೊಳೆನರಸೀಪುರ ತಾ.ಶಾಖೆಯ
ಪದಾಧಿಕಾರಿಗಳು



ಕರ್ನಾಟಕ ರಂಗಸಂಗೀತ ಪರಿಷತ್ತು ಸಕಲೇಶಪುರ ತಾ. ಶಾಖೆಯ
ಪದಾಧಿಕಾರಿಗಳು



ಕರ್ನಾಟಕ ರಂಗಸಂಗೀತ ಪರಿಷತ್ತು ಹಾಸನ ಜಿಲ್ಲಾ ಶಾಖೆಯ
ಪದಾಧಿಕಾರಿಗಳು